**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಗುಬ್ಬಿ.**

**ಉಪಸ್ಥಿತರು**

ಶ್ರೀಮತಿ. ಸವಿತರಾಣಿ ಹೆಚ್.ವಿ.,
ಬಿ.ಎ. ಎಲ್, ಎಲ್ಎಲ್.ಬಿ.,
**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಗುಬ್ಬಿ.**

**ದಿನಾಂಕಃ 29ನೇ ಜುಲೈ 2026**

**ಅಸಲು ದಾವಾ ಸಂಖ್ಯೆಃ 78/2014**

**ವಾದಿ :** ಶ್ರೀ ಹೆಚ್.ಎಸ್. ದಯಾನಂದಮೂರ್ತಿ
ಬಿನ್ ಟಿ.ಹೆಚ್. ಶ್ರೀ ರಂಗರಾಯ,

ವಯಸ್ಸು ಸುಮಾರು 44 ವರ್ಷ,
ವಾಸ : 1ನೇ ಕ್ರಾಸ್, ಹೊಸಪೇಟೆ, ಗುಬ್ಬಿ ಟೌನ್.

**(ಪ್ರತಿನಿಧಿಸುವವರುಃ ಶ್ರೀ ಸಿ.ಬಿ.ಹೆಚ್. ನ್ಯಾಯವಾದಿಗಳು)**

**ವಿರುದ್ಧ**

**ಪ್ರತಿವಾದಿಯರು :** 1. ಶ್ರೀ ರಾಮೋಜಿ ರಾವ್ ಬಿನ್ ಲೇಟ್ ಭೀಮ ರಾವ್,
ಮರಣ ಹೊಂದಿದ್ದು, ಕಾನೂನು ಬದ್ದ ವಾರಸುದಾರರಾದ

1(ಎ) ವಿನಯ ಬಿನ್ ರಾಮೋಜಿ ರಾವ್
ವಯಸ್ಸು ಸುಮಾರು 40 ವರ್ಷ,

1(ಬಿ) ವಿಜಯ ಬಿನ್ ರಾಮೋಜಿ ರಾವ್
ವಯಸ್ಸು ಸುಮಾರು 36 ವರ್ಷ,

ಇಬ್ಬರೂ ವಾಸ : ಮರಾಠಿ ಪಾಳ್ಯ,
ಕಡಬ ಹೋಬಳಿ, ಗುಬ್ಬಿ ತಾಲ್ಲೂಕು,
ತುಮಕೂರು ಜಿಲ್ಲೆ.

**2. ಶ್ರೀಮತಿ ಅನಸೂಯ ಬಿ.ಜಿ. ಬಿನ್ ರಾಮೋಜಿ ರಾವ್,**
ವಯಸ್ಸು ಸುಮಾರು 54 ವರ್ಷ,

ವಾಸ : ಬೈಲಹಳ್ಳಿ, ಕಡಬ ಹೋಬಳಿ,
ಗುಬ್ಬಿ ತಾಲ್ಲೂಕು

**(ಪ್ರತಿನಿಧಿಸುವವರುಃ ಶ್ರೀ ಸಿ.ಎಸ್.ಎ. ನ್ಯಾಯವಾದಿಗಳು)**

| | | | | |
|---|---|---|---|---|
| 1 | ದಾವಾ ದಾಖಲಿಸಿದ ದಿನಾಂಕ | 03.03.2014 | | |
| 2 | ದಾವಾ ಸ್ವರೂಪ | ನಿರ್ದಿಷ್ಟ ಕರಾರು ಅನುಷ್ಠಾನ ಕೋರಿ | | |
| 3 | ಸಾಕ್ಷಿ ವಿಚಾರಣೆ ಪ್ರಾರಭಿಸಿದ ದಿನಾಂಕ | 13.07.2015 | | |
| 4 | ತೀರ್ಪನ್ನು ಉದ್ಘೋಷಿಸಿದ ದಿನಾಂಕ | 29.07.2026 | | |
| 5 | ತೆಗೆದುಕೊಂಡ ಅವಧಿ | ವರ್ಷ | ತಿಂಗಳು | ದಿನಗಳು |
| | | 12 | 04 | 26 |

SAVITHARANI H V

Digitally signed by SAVITHARANI H V
Date: 2026.07.31 17:47:27 +0530

**(ಶ್ರೀಮತಿ. ಸವಿತರಾಣಿ ಹೆಚ್.ವಿ.)**
ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು, ಗುಬ್ಬಿ.

**-:<u>ತೀರ್ಪು</u>:-**

ಪ್ರತಿವಾದಿಯರು ವಾದಿಗೆ ದಿನಾಂಕಃ15.03.2012 ರ ನೋಂದಾಯಿತ ಕ್ರಯದ ಒಪ್ಪಂದದ ಕರಾರು ಪತ್ರದಂತೆ ವಾದಿಯ ಹೆಸರಿಗೆ ದಾವಾ ಸ್ವತ್ತನ್ನು ನೊಂದಾಯಿತ ಕ್ರಯ ಪತ್ರ ಮಾಡಿಕೊಡುವಂತೆ ಹಾಗೂ ಪ್ರತಿವಾದಿಗಳು ದಾವಾ ಸ್ವತ್ತಿನ ಸ್ವಾಧೀನವನ್ನು ವಾದಿಗೆ ವಹಿಸಿಕೊಡಲು ನಿರ್ದೇಶಿಸಿ ಆದೇಶ ನೀಡಬೇಕಾಗಿ ಕೋರಿ ಸಲ್ಲಿಸಿರುತ್ತಾರೆ.

2. <u>ವಾದಪತ್ರದ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇದೆಃ-</u>

1 ಮತ್ತು 2 ನೇ ಪ್ರತಿವಾದಿಗಳು ಪತಿ ಮತ್ತು ಪತ್ನಿಯಾಗಿದ್ದಾರೆ. ಪ್ರತಿವಾದಿಗಳು ತಮ್ಮ ಕಾನೂನುಬದ್ಧ ಅಗತ್ಯಗಳಿಗಾಗಿ ಒಟ್ಟು 1,92,500/- ರೂ.ಗಳ ಪ್ರತಿಫಲಕ್ಕೆ ದಾವಾ ಅನುಸೂಚಿ ಸ್ವತ್ತನ್ನು ವಾದಿಗೆ ಮಾರಾಟ ಮಾಡಲು ಒಪ್ಪಿ ದಿನಾಂಕ:15.3.2012 ರಂದು ವಾದಿಯೊಂದಿಗೆ ಕ್ರಯದ ಒಪ್ಪಂದವನ್ನು ಮಾಡಿಕೊಂಡು, ಒಪ್ಪಂದದ ದಿನದಂದೇ ಸಾಕ್ಷಿಗಳ ಸಮ್ಮುಖದಲ್ಲಿ ಪೂರ್ಣ ಕ್ರಯದ ಪ್ರತಿಫಲ ಮೊತ್ತ ರೂ.1,92,500/-ಗಳನ್ನು ಪಡೆದುಕೊಂಡಿದ್ದಾರೆ. ಪ್ರತಿವಾದಿಗಳು ದಿನಾಂಕ:15.03.2012 ರಂದು ವಾದಿಯ ಪರವಾಗಿ ನೋಂದಾಯಿತ ಕ್ರಯದ ಒಪ್ಪಂದದ ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಒಪ್ಪಂದದ ದಿನಾಂಕದಿಂದ 18 ತಿಂಗಳ ಒಳಗಾಗಿ ಎಲ್ಲಾ ಸಂಬಂಧಿತ ದಾಖಲೆಗಳನ್ನು ಪಡೆದುಕೊಳ್ಳುವ ಮೂಲಕ ಮತ್ತು ಬ್ಯಾಂಕಿನಿಂದ ಪಡೆದ ಸಾಲ ತೀರುವಳಿ ಮಾಡಿ, ಕ್ರಯ ಪತ್ರವನ್ನು ಮಾಡಿಕೊಡುವುದಾಗಿ ಮತ್ತು ನೋಂದಣಿ ಪ್ರಕ್ರಿಯೆಯು ಮುಗಿದ ನಂತರ, ದಾವಾ ಸ್ವತ್ತಿನ ಸ್ವಾಧೀನವನ್ನು ವಾದಿಗೆ ಹಸ್ತಾಂತರಿಸುವುದಾಗಿ ಒಪ್ಪಿರುತ್ತಾರೆ. ಆದರೆ ಪ್ರತಿವಾದಿಯರು ಕರಾರು ಪತ್ರದಲ್ಲಿ ನಿಗದಿಪಡಿಸಿದ ಸಮದಲ್ಲಿ ಕ್ರಯ ಪತ್ರವನ್ನು ಮಾಡಿಕೊಡಲು ವಿಫಲರಾದ್ದರಿಂದ, ವಾದಿಯು ಪ್ರತಿವಾದಿಯರನ್ನು ಸಂಪರ್ಕಿಸಿ ದಾವಾ ಸ್ವತ್ತನ್ನು ಕ್ರಯಪತ್ರ ಮಾಡಿಕೊಡುವಂತೆ ಹಲವು ಬಾರಿ ಕೋರಿದ್ದು, ಆದರೆ ಪ್ರತಿವಾದಿಯರು ಉದ್ದೇಶ ಪೂರ್ವಕವಾಗಿ ಕ್ರಯ ಪತ್ರವನ್ನು ಮಾಡಿಕೊಡಲು ನಿರಾಕರಿಸಿರುತ್ತಾರೆ ಹಾಗೂ ದಾವಾ ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡಲು ಪ್ರಯತ್ನಿಸಿರುತ್ತಾರೆ. ಆದ್ದರಿಂದ ವಾದಿಯು ಪ್ರತಿವಾದಿಯರಿಗೆ ಕಾನೂನು ತಿಳುವಳಿಕೆ ಪತ್ರವನ್ನು ನೀಡಿ ತಾನು ಕ್ರಯದ ಕರಾರು ಪತ್ರದಂತೆ ನಡೆದುಕೊಳ್ಳಲು ತಯಾರಿರುವುದಾಗಿ ಹಾಗೂ ಕ್ರಯದ ಕರಾರು ಪತ್ರದಂತೆ ದಾವಾ ಸ್ವತ್ತನ್ನು ಕ್ರಯ ಪತ್ರವನ್ನು ಮಾಡಿಕೊಡಬೇಕೆಂದು ತಿಳಿಸಿದ್ದು, ಸದರಿ ನೋಟೀಸ್ ಜಾರಿಯಾಗಿದ್ದರೂ ಸಹ ಪ್ರತಿವಾದಿಗಳು ಕ್ರಯದ ಕರಾರು ಪತ್ರದಂದತೆ ದಾವಾ ಸ್ವತ್ತನ್ನು ವಾದಿಗೆ ಕ್ರಯಪತ್ರವನ್ನು ಮಾಡಿಕೊಟ್ಟಿರುವುದಿಲ್ಲ. ಆದ್ದರಿಂದ ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ದ ದಾವಾ ಆಸ್ತಿಯನ್ನು ನೊಂದಣಿ ಕ್ರಯಪತ್ರ ಮಾಡಿಸಿಕೊಳ್ಳುವ ಸಲುವಾಗಿ ಕರಾರಿನ ನಿರ್ದಿಷ್ಟ

ಪರಿಪಾಲನೆಯ ಪರಿಹಾರ ಕೋರಿ ಈ ದಾವೆಯನ್ನು ಸಲ್ಲಿಸಿದ್ದು, ದಾವೆಯಲ್ಲಿ ಕೋರಿರುವಂತೆ ಡಿಕ್ರಿ ಮಾಡಬೇಕೆಂದು ಕೋರಿರುತ್ತಾರೆ.

**3.** ಈ ದಾವೆಯನ್ನು ದಾಖಲಿಸಿಕೊಂಡ ನಂತರ ಪ್ರತಿವಾದಿಯರಿಗೆ ದಾವಾ ಸಮನ್ಸ್ ಅನ್ನು ಜಾರಿಗೊಳಿಸಿದ್ದು, ಪ್ರತಿವಾದಿಯರು ತಮ್ಮ ವಕೀಲರ ಮೂಲಕ ಹಾಜರಾಗಿ ತಮ್ಮ ಪರ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ.

**ಪ್ರತಿವಾದಿಯರು ಸಲ್ಲಿಸಿರುವ ಪ್ರತಿವಾದ ಪತ್ರದ ಅಂಶಗಳು ಈ ಕೆಳಗಿನಂತರುತ್ತವೆ:-**

ಪ್ರತಿವಾದಿಯರು ತನ್ನ ತಕರಾರಿನಲ್ಲಿ ವಾದಿಯು ತನ್ನ ವಾದಪತ್ರದಲ್ಲಿ ತಿಳಿಸಿರುವಂತಹ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು, ಪ್ರತಿವಾದಿಗಳು ದಾವಾ ಅನುಸೂಚಿತ ಸ್ವತ್ತಿನ ಮಾಲೀಕತ್ವವನ್ನು ಹೊಂದಿದ್ದು, ಅದರ ಸ್ವಾಧೀನಾನುಭವದಲ್ಲಿರುತ್ತಾರೆ. ಪ್ರತಿವಾದಿಗಳು ತಮ್ಮ ಕೌಟುಂಬಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಮತ್ತು ತಾವು ಮಾಡಿಕೊಂಡಿದ್ದ ಸಣ್ಣಪುಟ್ಟ ಸಾಲಗಳನ್ನು ತೀರಿಸಲು ರೂ.2,00,000/- ಕೈಗಡ ಸಾಲ ನೀಡುವಂತೆ ವಾದಿಯನ್ನು ಸಂಪರ್ಕಿಸಿರುತ್ತಾರೆ. ಅದಕ್ಕೆ ವಾದಿಯು ರೂ. 2,00,000/-ಸಾಲ ನೀಡಲು ಒಪ್ಪಿಕೊಂಡಿದ್ದು, ಸದರಿ ಸಾಲದ ಭದ್ರತೆಗಾಗಿ ದಾವಾ ಅನುಸೂಚಿತ ಸ್ವತ್ತನ್ನು ವಾದಿಯ ಪರವಾಗಿ ಅಡಮಾನ ಇಟ್ಟು ಭದ್ರತಾ ದಾಖಲೆಗಳನ್ನು ಬರೆದುಕೊಡುವಂತೆ ಪ್ರತಿವಾದಿಗಳನ್ನು ಒತ್ತಾಯಿಸಿದ್ದರು. ವಾದಿಯ ಸಲಹೆಯ ಮೇರೆಗೆ ಈ ಪ್ರತಿವಾದಿಗಳು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ವಾದಿಯ ಪರವಾಗಿ ನೋಂದಾಯಿತ ಸರಳ ಅಡಮಾನ ಪತ್ರವನ್ನು ಮಾಡಿಕೊಡಲು ಒಪ್ಪಿಕೊಂಡಿದ್ದರು. ಇದಕ್ಕಾಗಿ ವಾದಿಯು ಒಪ್ಪಿಕೊಂಡು ರೂ.1,92,500-00 ಗಳನ್ನು ಪ್ರತಿವಾದಿಗಳಿಗೆ ನೀಡಲಾಗಿದ್ದು, ಈ ಪ್ರತಿವಾದಿಗಳು ಸದರಿ ಸಾಲದ ಮೊತ್ತವನ್ನು ಸರಳ ಬಡ್ಡಿಯೊಂದಿಗೆ ನಿಗದಿತ ಅವಧಿಯೊಳಗೆ ಮರುಪಾವತಿಸಲು ಒಪ್ಪಿಕೊಂಡು ಸ್ವೀಕರಿಸಿ ದಿನಾಂಕ:15.03.2012 ರಂದು ವಾದಿಯ ಪರವಾಗಿ ದಾಖಲೆಯನ್ನು ಬರೆದುಕೊಡಲಾಗಿದೆ. ಸದರಿ ದಾಖಲೆಯು ಕೇವಲ ಸರಳ ಅಡಮಾನ ಪತ್ರವೇ ಹೊರತು ಕ್ರಯದ ಒಪ್ಪಂದದ ಪತ್ರವಾಗಿರುವುದಿಲ್ಲ. ಈ ಪ್ರತಿವಾದಿಗಳು ಮುಗ್ದರಾಗಿದ್ದು, ಅವರಿಗೆ ಓದಲು ಮತ್ತು ಬರೆಯಲು ಹಾಗೂ ದಾಖಲೆಗಳ ವಿಷಯಗಳನ್ನು ಅರ್ಥಮಾಡಿಕೊಳ್ಳಲು

ತಿಳಿಯುವುದಿಲ್ಲ. ಪ್ರತಿವಾದಿಗಳು ಸಾಲದ ಭದ್ರತೆಗಾಗಿ ಸರಳ ನೋಂದಾಯಿತ ಅಡಮಾನ ಪತ್ರಕ್ಕೆ ಬರೆದುಕೊಡಲು ಒಪ್ಪಿಕೊಂಡಿದ್ದರೂ ಸಹ, ಪ್ರತಿವಾದಿಯರ ನ್ಯೂನ್ಯತೆಯ ಅನಗತ್ಯ ಪ್ರಯೋಜನವನ್ನು ಪಡೆದುಕೊಂಡು, ದಾವಾ ಆಸ್ತಿಯನ್ನು ಮಾರಾಟ ಮಾಡಲು ಕ್ರಯದ ಒಪ್ಪಂದದ ರೂಪದಲ್ಲಿ ವಾದಿಯು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ಈ ಪ್ರತಿವಾದಿಗಳು ವಾದಿಯ ಪರವಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಲು ಯಾವುದೇ ನೋಂದಾಯಿತ ಕ್ರಯದ ಒಪ್ಪಂದ ಪತ್ರವನ್ನು ಎಂದಿಗೂ ಮಾಡಿಕೊಟ್ಟಿರುವುದಿಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ಪ್ರತಿವಾದಿಯರಿಗೆ ತಮ್ಮ ಜೀವನೋಪಾಯಕ್ಕಾಗಿ ಬೇರೆ ಯಾವುದೇ ಆಸ್ತಿ ಇರುವುದಿಲ್ಲ ಮತ್ತು ಇದು ಪ್ರತಿವಾದಿಯರಿಗೆ ಅಪಾರ ನಷ್ಟವನ್ನು ಉಂಟುಮಾಡುತ್ತದೆ. ಆದ್ದರಿಂದ ಸದರಿ ದಾವೆಯನ್ನು ಖರ್ಚು ಸಮೇತ ವಜಾ ಮಾಡಬೇಕಾಗಿ ಪ್ರಾರ್ಥಿಸಿಕೊಂಡಿರುತ್ತಾರೆ.

**4.** ಮೇಲ್ಕಾಣಿಸಿದ ವಾದ ಮತ್ತು ಪ್ರತಿವಾದ ಪತ್ರಗಳಲ್ಲಿನ ಸಂಗತಿಗಳನ್ನು ಆಧರಿಸಿ ನ್ಯಾಯಾಲಯವು ಈ ಕೆಳಗಿನಂತೆ ಅಂಶಗಳನ್ನು ರೂಪಿಸಿರುತ್ತಾರೆ:-

**<u>ವಿವಾದಾಂಶಗಳು</u>**

1. Whether the plaintiff proves that, the defendants have executed sale agreement dated:15.03.2012 by receiving full sale consideration amount of Rs.1,92,500/- from the plaintiff?

2. Whether the plaintiff proves that, he is ever ready and willing to perform her part of contract?

3. Whether the plaintiff is entitled for relief as sought for?

4. What order or decree?

**5**. ಈ ಮೇಲ್ಕಂಡ ಅಂಶಗಳನ್ನು ರುಜುವಾತುಪಡಿಸಲು ವಾದಿ ತನ್ನನ್ನು ತಾನು ಪಿ.ಡಬ್ಲ್ಯೂ -1 ಎಂದು ಸಾಕ್ಷಿ ಮಾಡಿಸಿದ್ದು, ನಿಶಾನೆ.ಪಿ-1 ರಿಂದ ನಿಶಾನೆ.ಪಿ-9 ರವರೆಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ವಾದಿಯು ತಮ್ಮ ಸಾಕ್ಷ್ಯಕ್ಕೆ ಪೂರಕವಾಗಿ ಪಿ.ಡಬ್ಲ್ಯೂ -2 ಮತ್ತು 3 ರವರನ್ನು ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರತಿವಾದಿಯರಿಗೆ ದಾವಾ ಸಮನ್ಸ್ ಅನ್ನು ಜಾರಿಗೊಳಿಸಿದ್ದು, ಪ್ರತಿವಾದಿಯರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದು, ಪ್ರತಿವಾದಿಯರು ವಾದಿಯ ದಾವಾಂಶಗಳನ್ನು ಅಲ್ಲಗಳೆದು ತನ್ನ ಪರ ನಿಲುವನ್ನು ಸಾಭೀತುಪಡಿಸಲು 2ನೇ ಪ್ರತಿವಾದಿಯು ತನ್ನನ್ನು ತಾನು ಡಿ.ಡಬ್ಲ್ಯೂ .1 ಎಂದು ಸಾಕ್ಷಿ ಮಾಡಿಸಿದ್ದು, ನಿಶಾನೆ.ಡಿ-1 ರಿಂದ ನಿಶಾನೆ.ಡಿ-5 ರಂತೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ.

**6**. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

**7**. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆಃ-

| | | |
|---|---|---|
| ವಿವಾದಾಂಶ ಸಂಖ್ಯೆ- 1 | : | ನಕಾರಾತ್ಮಕವಾಗಿ |
| ವಿವಾದಾಂಶ ಸಂಖ್ಯೆ- 2 | : | ನಕಾರಾತ್ಮಕವಾಗಿ |
| ವಿವಾದಾಂಶ ಸಂಖ್ಯೆ- 3 | : | ನಕಾರಾತ್ಮಕವಾಗ |
| ವಿವಾದಾಂಶ ಸಂಖ್ಯೆ- 4 | : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ, |

**:: ಕಾ ರ ಣ ಗ ಳು ::**

**8**. **ಅಂಶ 1 ರಿಂದ 3 :** ಈ ಮೂರು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದಲೂ ಮತ್ತು ಇವುಗಳಿಗೆ ನೀಡುವ ಕಾರಣಗಳು ಒಂದೇ ಆಗಿರುವುದರಿಂದಲೂ ಈ ಮೂರು ಅಂಶಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ. ಈ ಮೂರು ಅಂಶಗಳನ್ನು ಸಾಬೀತುಪಡಿಸುವಂತಹ ಹೊಣೆಗಾರಿಕೆಯನ್ನು ವಾದಿಯು ಹೊಂದಿದ್ದು, ಸದರಿ

ಅಂಶಗಳನ್ನು ಸಾಬೀತುಪಡಿಸಲು ವಾದಿಯು ನ್ಯಾಯಾಲಯದಲ್ಲಿ ಹಾಜರಾಗಿ ತನ್ನ ಪರವಾಗಿ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ನೀಡಿರುತ್ತಾರೆ.

**9.** ಈ ಮೇಲ್ಕಂಡ ಅಂಶಗಳ ಕುರಿತು ಸಾಬೀತುಪಡಿಸುವ ಸಲುವಾಗಿ ವಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ-1 ಎಂದು ಸಾಕ್ಷ್ಯ ಮಾಡಿಸಿದ್ದು, ತನ್ನ ಮೌಖಿಕ ಸಾಕ್ಷ್ಯವನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು, ಮೇಲ್ಕಂಡ ವಾದಪತ್ರದಲ್ಲಿನ ಅಂಶಗಳನ್ನೇ ತನ್ನ ಪ್ರಮಾಣ ಪತ್ರದಲ್ಲಿ ಪುನರುಚ್ಚರಿಸಿರುತ್ತಾರೆ. ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ **ನಿಶಾನೆ.ಪಿ-1 ರಿಂದ ನಿಶಾನೆ.ಪಿ-9** ರವರೆಗೆ ದಾಖಲಾತಿಗಳನ್ನು ನಿಶಾನಿಸಿರುತ್ತಾರೆ. **ನಿಶಾನೆ.ಪಿ.1** ದಿನಾಂಕಃ15.03.2012 ರ ಕ್ರಯದ ಕರಾರು ಪತ್ರವಾಗಿದ್ದು, ದಾವಾ ಷೆಡ್ಯೂಲ್ ಸ್ವತ್ತನ್ನು ವಾದಿಗೆ 1 ಮತ್ತು 2ನೇ ಪ್ರತಿವಾದಿಯರು ಮಾರಾಟ ಮಾಡಲು ಒಪ್ಪಿ ಒಪ್ಪಂದದ ಕರಾರು ಪತ್ರವನ್ನು ಮಾಡಿ ಕೊಟ್ಟಿದ್ದು, ಸದರಿ ದಿನದಂದು ವಾದಿಯಿಂದ 1 ಮತ್ತು 2ನೇ ಪ್ರತಿವಾದಿಯರು ಸಾಕ್ಷಿದಾರರ ಸಮ್ಮುಖ ಕ್ರಯದ ಮೊಬಲಗು ಪೂರಾ ರೂ.1,92,500/- ಅನ್ನು ಪಡೆದಿರುತ್ತಾರೆಂದು ನಮೂದು ಇರುವುದು ಕಂಡುಬಂದಿರುತ್ತದೆ. **ನಿಶಾನೆ.ಪಿ.2** ವಾದಿಯು ದಿನಾಂಕ:09.01.2014 ರಂದು 1 ಮತ್ತು 2ನೇ ಪ್ರತಿವಾದಿಯರಿಗೆ ನೀಡಿರುವ ಕಾನೂನು ತಿಳುವಳಿಕೆ ಪತ್ರದ ಪ್ರತಿಯಾಗಿರುತ್ತದೆ. **ನಿಶಾನೆ.ಪಿ-3 ಮತ್ತು 4** ಅಂಚೆ ರಶೀದಿಗಳಾಗಿರುತ್ತವೆ. **ನಿಶಾನೆ.ಪಿ.5** ಅಂಚೆ ಸ್ವೀಕೃತಿಯಾಗಿರುತ್ತದೆ. **ನಿಶಾನೆ.ಪಿ.6** ಜಾರಿಯಾಗದೆ ಹಿಂತಿರುಗಿದ ನೋಟೀಸ್ ಪ್ರತಿಯಾಗಿರುತ್ತದೆ. **ನಿಶಾನೆ.ಪಿ.7** ಅಂಚೆ ಲಕೋಟೆಯಾಗಿರುತ್ತದೆ. **ನಿಶಾನೆ.ಪಿ.8** ಸರ್ವೆ ನಂಬರ್ 41/3 ಅಂದರೆ ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯಾಗಿದ್ದು, 1ನೇ ಪ್ರತಿವಾದಿಯ ಹೆಸರಿನಲ್ಲಿ 2 ಎಕರೆ 13 ಗುಂಟೆ ಜಮೀನು ಇರುವುದು ಕಂಡು ಬಂದಿರುತ್ತದೆ. **ನಿಶಾನೆ.ಪಿ-9**ಸರ್ವೆ ನಂಬರ್ 41/10 ಅಂದರೆ ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯಾಗಿದ್ದು, 2ನೇ ಪ್ರತಿವಾದಿಯ ಹೆಸರಿನಲ್ಲಿ 2 ಎಕರೆ 13 ಗುಂಟೆ ಜಮೀನು ಇರುವುದು ಕಂಡು ಬಂದಿರುತ್ತದೆ.

**10.** ಪಿ.ಡಬ್ಲ್ಯೂ 1 ರವರನ್ನು ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ತಮ್ಮ ಪಾಟೀ ಸವಾಲಿನಲ್ಲಿ, ಸದರಿ ದಾವೆಯನ್ನು ಹೊರತುಪಡಿಸಿ ಗುಬ್ಬಿ ನ್ಯಾಯಾಲಯದಲ್ಲಿ ಮತ್ತೊಂದು

ದಾವೆ ನನ್ನ ನಿವೇಶನಕ್ಕೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುತ್ತದೆ. ಮತ್ತು ಎರಡು ಪ್ರಕರಣಗಳು ಚೆಕ್ ಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಸುಮಾರು 15 ವರ್ಷಗಳ ಹಿಂದೆ ನಾನು money lending ವ್ಯವಹಾರವನ್ನು ಮಾಡುತ್ತಿದ್ದೆ. ಸದರಿ finance ನ್ನು ನಾನು ವಿನಯ್ ಕುಮಾರ್ ಮತ್ತು ಮಹೇಶ್ ಎನ್ನುವವರು ಒಟ್ಟಿಗೆ ನಡೆಸುತ್ತಿದ್ದೆವು. ಸದರಿ finance ನ್ನು 2002 ಅಥವಾ 2003 ರಿಂದ ನಿಲ್ಲಿಸಿರುತ್ತೇನೆ. 1 ನೇ ಪ್ರತಿವಾದಿ ನಮ್ಮ ಅಂಗಡಿಯ ಗ್ರಾಹಕರು. 1 ನೇ ಪ್ರತಿವಾದಿಗೂ ನನಗೂ ಬಹಳ ವಿಶ್ವಾಸ ಇತ್ತು ಎಂದರೆ ಸರಿ. ಸದರಿ ದಾವೆ ಸ್ವತಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿ ಮತ್ತು ಅವರ ಅಣ್ಣ ತಮ್ಮಂದಿರ ನಡುವೆ ಒಂದು ದಾವೆ ಚಾಲ್ತಿಯಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ತಂದೆಯ ಹೆಸರು ಭೀಮರಾವ್ ಎಂದರೆ ಇರಬಹುದು. ಸದರಿ ಭೀಮರಾವ್ ರವರಿಗೆ 3 ಜನ ಮಕ್ಕಳು ಎಂದರೆ ಸಾಕ್ಷಿ ನನಗೆ 1 ನೇ ಪ್ರತಿವಾದಿಯ ಕುಟುಂಬದ ಬಗ್ಗೆ ತಿಳಿದಿಲ್ಲ ಎನ್ನುತ್ತಾರೆ. ದಾವಾ ಸ್ವತಿನ ಸರ್ವೆ ನಂ. 41/3 ಆಗಿರುತ್ತದೆ. ಸದರಿ ದಾವಾ ಸ್ವತ್ತು ಬ್ಯಾಲಹಳ್ಳಿಯಲ್ಲಿ ಇರುತ್ತದೆ. ಸದರಿ ದಾವಾ ಸ್ವತ್ತನ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. 1 ನೇ ಪ್ರತಿವಾದಿ ಮತ್ತು ಅವರ ಅಣ್ಣ ತಮ್ಮಂದಿರು ಭಾಗವಾಗಿದ್ದು, ಸರ್ವೆ ನಂ. 41/3 ರಲ್ಲಿ 1 ನೇ ಪ್ರತಿವಾದಿಗೆ ಸೇರಿದ ಭಾಗ ಎಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ, ನಾನು ಸದರಿ ಜಮೀನನ್ನು ನೋಡಿರುವುದಿಲ್ಲ. ಮೃತ 1 ನೇ ಪ್ರತಿವಾದಿ ಮತ್ತು ಅವರ ಅಣ್ಣ ತಮ್ಮಂದಿರು ಭಾಗವಾದಾಗಿ ಸರ್ವೆ ನಂ. 41/3 ರಲ್ಲಿ 2 ಎಕರೆ 13 ಗುಂಟೆ 1 ನೇ ಪ್ರತಿವಾದಿಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ.

**11.** ನಿ.ಪಿ.8 ರಲ್ಲಿ ನ್ಯಾಯಾಲಯದ ಆದೇಶ ಎಂದು ಕಾಲಂ ನಂ. 10 ರಲ್ಲಿ ನಮೂದಿಸಲಾಗಿದೆ, ಸದರಿ ಆದೇಶವನ್ನು ನಾನು ಪರಿಶೀಲಿಸಿರುವುದಿಲ್ಲ. ನಿ.ಪಿ.1 ರನ್ನು ಬರೆಸಿಕೊಳ್ಳುವ ಮುನ್ನ ಎಲ್ಲಾ ದಾಖಲಾತಿಗಳನ್ನು ನೋಡಿ ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಮತ್ತು 1 ನೇ ಪ್ರತಿವಾದಿ ಎಲ್ಲಾ ದಾಖಲಾತಿಗಳನ್ನು ಸರಿಪಡಿಸಿಕೊಂಡು ನಾನು ಕ್ರಯಪತ್ರವನ್ನು ಬರೆಸಿಕೊಡುತ್ತೇನೆ ಎಂದು ನನಗೆ ಹೇಳಿರುತ್ತಾರೆ.1 ನೇ ಮತ್ತು 2 ನೇ ಪ್ರತಿವಾದಿಗಳಿಗೆ ಇಬ್ಬರು ಮಕ್ಕಳಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಕ್ರಯಪತ್ರವನ್ನು ಬರೆಸಿಕೊಳ್ಳುವಾಗ 1 ನೇ

ಪ್ರತಿವಾದಿಯ ಮಕ್ಕಳನ್ನೂ ಸಹ ಕರೆದುಕೊಂಡು ಬಂದು ಅದಕ್ಕೆ ಸಹಿ ಮಾಡಿಸುವುದಾಗಿ ನನಗೆ ಹೇಳಿರುತ್ತಾರೆ. ದಿ: 15.03.2012 ರಲ್ಲಿ ಮೃತ 1 ನೇ ಪ್ರತಿವಾದಿಗೆ ಮಕ್ಕಳಿರುವ ವಿಚಾರ ನನಗೆ ತಿಳಿದಿತ್ತು. ದಾವಾ ಸ್ವತಿನಲ್ಲಿ ಮೃತ 1 ನೇ ಪ್ರತಿವಾದಿಯ ಮಕ್ಕಳಿಗೆ ಸಹ ಭಾಗಾಂಶ ಇರುತ್ತದೆ. 1 ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇದ್ದರಿಂದ ನನಗೆ 2 ಲಕ್ಷ ರೂಪಾಯಿಗಳನ್ನು ಕೇಳಿದ ಮೇರೆಗೆ ನಾನು ಹಣವನ್ನು ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ದಾವಾ ಸ್ವತ್ತನ್ನು ಮಾರಾಟ ಮಾಡಲು 1 ನೇ ಪ್ರತಿವಾದಿ ಮತ್ತು ನನ್ನ ನಡುವೆ 2 ಲಕ್ಷಕ್ಕೆ ವ್ಯವಹಾರವಾಗಿದ್ದು ಅದರಲ್ಲಿ ನಾನು 1,92,500/- ರೂಪಾಯಿಗಳನ್ನು 1 ನೇ ಪ್ರತಿವಾದಿಗೆ ನೀಡಿರುತ್ತೇನೆ ಎನ್ನುತ್ತಾರೆ. 1 ನೇ ಪ್ರತಿವಾದಿಗೆ 1,92,500/- ರೂಪಾಯಿಗಳನ್ನು ನಾನು ನನ್ನ ಅಂಗಡಿಯಲ್ಲಿ ನೀಡಿರುತ್ತೇನೆ. ಸದರಿ ಹಣವನ್ನು ನೀಡುವ ಸಂದರ್ಭದಲ್ಲಿ ಯಾರೂ ಇರಲಿಲ್ಲ, 1 ನೇ ಪ್ರತಿವಾದಿ ಒಬ್ಬರೇ ಬಂದಿದ್ದರು. ಸಾಕ್ಷಿ ಮುಂದುವರಿದು ನಿ.ಪಿ.1 ನ್ನು ನೋಂದಣಿ ಮಾಡಿದ ನಂತರ 1 ನೇ ಪ್ರತಿವಾದಿಗೆ ನಾನು ಹಣವನ್ನು ಅಂಗಡಿಯಲ್ಲಿ ನೀಡಿರುತ್ತೇನೆ. 1 ಮತ್ತು 2 ನೇ ಪ್ರತಿವಾದಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯದ ಕಾರಾರು ಪತ್ರವನ್ನು ಬರೆದುಕೊಡುವ ಹಕ್ಕು ಇರಲಿಲ್ಲ, ಆದ್ದರಿಂದ ಅವರು ಸದರಿ ಕಾರಾರನ್ನು ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿ ಅವರಿಗೆ ಇರುವ ಹಕ್ಕಿನ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಡಿಸೆಂಬರ್ 2013 ನೇ ಇಸವಿಯ ಒಳಗಾಗಿ ದಾವಾ ಸ್ವತಿನ ಕ್ರಯ ಪತ್ರವನ್ನು ಬರೆದುಕೊಡುವಂತೆ ಪ್ರತಿವಾದಿಗಳಿಗೆ ನಾನು ಯಾವುದೇ ನೋಟಿಸ್ ನೀಡಿರುವುದಿಲ್ಲ. ಸಾಕ್ಷಿ ಮುಂದುವರಿದು ನಾನು ಅನೇಕ ಬಾರಿ ಪ್ರತಿವಾದಿಗಳ ಮನೆಯ ಹತ್ತಿರ ಹೋಗಿ ಕ್ರಯಪತ್ರವನ್ನು ಬರೆದುಕೊಡುವಂತೆ ಹೇಳಿರುತ್ತೇನೆ.ನಾನು ನಂತರ ದಿ: 09.01.2014 ರಂದು ಪ್ರತಿವಾದಿಗಳಿಗೆ ನೋಟಿಸ್ ನೀಡಿರುತ್ತೇನೆ ಎಂದರೆ ಸರಿ. ಸದರಿ ನೋಟಿಸ್ ನೀಡಿದ ನಂತರ ಪ್ರತಿವಾದಿಗಳು ನನ್ನ ಬಳಿ ಬಂದಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು, ಪ್ರತಿವಾದಿಗಳು ಕ್ರಯಪತ್ರವನ್ನು ಬರೆದುಕೊಡಲು ಇನ್ನಷ್ಟು ಸಮಯ ಬೇಕೆಂದು ನನ್ನ ಬಳಿ ಕೇಳಿಕೊಂಡರು ಎನ್ನುತ್ತಾರೆ. ದಾವಾ ಸ್ವತಿನ ಈಗಿನ ಮಾರುಕಟ್ಟೆಯ ಬೆಲೆ 1 ಗುಂಟೆಗೆ 25 ರಿಂದ 30 ಸಾವಿರ ಇರುತ್ತದೆ. ದಾವಾ ಸ್ವತ್ತು ಯಾವಾಗ ಸರ್ವೆ ನಂಬರ್ 41/10 ಎಂದು ಪೋಡಿಯಾಗಿರುತ್ತದೆ ಎಂದು ನನಗೆ ನಿರ್ಧಿಷ್ಟವಾಗಿ ಗೊತ್ತಿಲ್ಲ. ಅದಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 1ನೇ ಪ್ರತಿವಾದಿಗೆ ದಾವಾ ಸ್ವತ್ತು ತಮ್ಮ ಅಣ್ಣ ತಮ್ಮಂದಿರ ಜೊತೆ ಆದ

ವಿಭಾಗದ ಮುಖಾಂತರ ಬಂದಿರುತ್ತದೆ. ನಿಶಾನೆ.ಪಿ-1 ನ್ನು 1ಮತ್ತು 2ನೇ ಪ್ರತಿವಾದಿಯರಿಗೆ ಬರೆದುಕೊಡಲು ಹಕ್ಕಿರಲಿಲ್ಲ ಎಂದರೆ ಸರಿ ಎಂದು ಉತ್ತರಿಸಿದ್ದು ಇನ್ನುಳಿದ ಪ್ರಶ್ನೆಗಳನ್ನು ಅಲ್ಲಗಳೆದಿರುವುದು ಕಂಡು ಬಂದಿರುತ್ತದೆ.

**12.** ವಾದಿಯು ತನ್ನ ಸಾಕ್ಷ್ಯಕ್ಕೆ ಪೂರಕವಾಗಿ ಪಿ.ಡಬ್ಲ್ಯೂ -2 ರವರನ್ನು ತನ್ನ ಪರ ಸಾಕ್ಷಿದಾರರನ್ನಾಗಿ ಗುರುತಿಸಿಕೊಂಡಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ವಾದಿ ಮತ್ತು 1 ಮತ್ತು 2ನೇ ಪ್ರತಿವಾದಿಯರು ನನಗೆ ಪರಿಚಯಸ್ಥರು. ವಾದಿಗೆ ದಾವಾ ಸ್ವತ್ತನ್ನು ಪ್ರತಿವಾದಿಯರು ದಿನಾಂಕ:15.03.2012 ರಂದು ರೂ.1,92,500/- ಗಳಿಗೆ ಮಾರಾಟ ಮಾಡಲು ಒಪ್ಪಿ ತನ್ನ ಸಮ್ಮುಖದಲ್ಲಿಯೇ ಕ್ರಯದ ಬಾಬ್ತು ಪೂರಾ ಹಣ ರೂ. 1,92,500/- ಗಳನ್ನು ಪಡೆದುಕೊಂಡು ಕರಾರು ಪತ್ರವನ್ನು ತಯಾರಿಸಿ ನಾನು ಅದಕ್ಕೆ ಸಾಕ್ಷಿದಾದರರಾಗಿ ಸಹಿ ಮಾಡಿರುತ್ತೇನೆಂದು ಪ್ರಮಾಣ ಪತ್ರವನ್ನು ಸಲ್ಲಿಸಿರುವುದು ಕಂಡು ಬಂದಿರುತ್ತದೆ.

**13.** 1 ಮತ್ತು 2ನೇ ಪ್ರತಿವಾದಿಯ ಪರ ವಕೀಲರು ಪಿ.ಡಬ್ಲ್ಯೂ - 2 ರವರನ್ನು ಪಾಟೀ ಸವಾಲು ಮಾಡಿದಾಗ ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ ವಾದಿಯ ಪೇಂಟ್ ಅಂಗಡಿಗೆ ನಾನು ಗ್ರಾಹಕನಾಗಿರುತ್ತೇನೆ ಆದ್ದರಿಂದ ವಾದಿ ನನಗೆ ಪರಿಚಯ. ವಾದಿ ನನ್ನ ಮಾವ. 1 ನೇ ಪ್ರತಿವಾದಿಯ ತಂದೆ ಹೆಸರು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯನ್ನು ನಾನು ನೋಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ವಕೀಲರು ಬರೆಸಿದ್ದು ಅದಕ್ಕೆ, ನಾನು ಸಹಿ ಮಾಡಿರುತ್ತೇನೆ, ಅದರಲ್ಲಿರುವ ವಿಚಾರಗಳನ್ನು ನಾನು ಹೇಳಿ ಬರೆಸಿರುವುದಿಲ್ಲ. ದಾವಾ ಸ್ವತ್ತನ್ನು ನಾನು ನೋಡಿರುವುದಿಲ್ಲ. ದಾವಾ ಸ್ವತ್ತು 1 ನೇ ಪ್ರತಿವಾದಿಗೆ ವಿಭಾಗದ ಮೂಲಕ ಬಂದಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಇಬ್ಬರು ಮಕ್ಕಳು, ಅವರೆಂದರೆ ಪ್ರತಿವಾದಿ 1(ಎ) ಮತ್ತು (ಬಿ). ಅವರೆಲ್ಲರೂ 1 ನೇ ಪ್ರತಿವಾದಿಯ ಜೊತೆಗೆ ಬ್ಯಾಲಹಳ್ಳಿ, ಗ್ರಾಮದಲ್ಲಿ ವಾಸವಿದ್ದರು ಎಂದರೆ ಸರಿ. ಪ್ರತಿವಾದಿ 1(ಎ) ಮತ್ತು (ಬಿ) ಈಗಲೂ ಬ್ಯಾಲಹಳ್ಳಿಯಲ್ಲೇ ವಾಸವಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಾದಿ ಮತ್ತು 1ನೇ ಪ್ರತಿವಾದಿ ನಡುವೆ ಯಾವ ರೀತಿ ಮಾತುಕತೆ ನಡೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ವಾದಿಯಿಂದ 1,92,500/-

ರೂಪಾಯಿಗಳನ್ನು ನನ್ನ ಸಮಕ್ಷಮ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಿ.ಪಿ.1 ಕಾರಾರು ಪತ್ರ ಯಾವ ದಿನಾಂಕ ದಂದು , ಎಷ್ಟು ಸಮಯಕ್ಕೆ ಮತ್ತು ಎಲ್ಲಿ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ವಾದಿಯಿಂದ 1,92,500/- ರೂಪಾಯಿಗಳನ್ನು ಸಾಲವಾಗಿ ಪಡೆದು, ಅದರ ಭದ್ರತೆಗೆ ಅಡಮಾನ ಪತ್ರ ಬರೆದುಕೊಡುತ್ತಿದ್ದೇವೆ ಎಂದುಕೊಂಡು ನಿ.ಪಿ.1 ಕ್ಕೆ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುವುದು ಕಂಡು ಬಂದಿರುತ್ತದೆ.

**14.** ವಾದಿಯು ತನ್ನ ಸಾಕ್ಷ್ಯಕ್ಕೆ ಪೂರಕವಾಗಿ ಮತ್ತೊಬ್ಬ ಸಾಕ್ಷ್ಯಾ ಧಾರರಾದ ಪಿ.ಡಬ್ಲ್ಯೂ -3 ರವರನ್ನು ತನ್ನ ಪರ ಸಾಕ್ಷಿದಾರರನ್ನಾಗಿ ಗುರುತಿಸಿಕೊಂಡಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ವಾದಿ ಮತ್ತು 1 ಮತ್ತು 2ನೇ ಪ್ರತಿವಾದಿಯರು ನನಗೆ ಪರಿಚಯಸ್ಥರು. ವಾದಿಗೆ ದಾವಾ ಸ್ವತ್ತನ್ನು ಪ್ರತಿವಾದಿಯರು ದಿನಾಂಕ:15.03,2012 ರಂದು ರೂ.1,92,500/- ಗಳಿಗೆ ಮಾರಾಟ ಮಾಡಲು ಒಪ್ಪಿ ತನ್ನ ಸಮ್ಮುಖದಲ್ಲಿಯೇ ಕ್ರಯದ ಬಾಬ್ತು ಪೂರಾ ಹಣ ರೂ. 1,92,500/- ಗಳನ್ನು ಪಡೆದುಕೊಂಡಿದ್ದು, 1 ನೇ ಪ್ರತಿವಾದಿಯು ತಿಳಿಸಿದಂತೆ ಕರಾರು ಪತ್ರವನ್ನು ತಾನೇ ತಯಾರಿಸಿಕೊಟ್ಟಿದ್ದು, ಅದಕ್ಕೆ ಉಭಯ ಪಕ್ಷಗಾರರು ತನ್ನ ಹಾಗೂ ಸಾಕ್ಷಿದಾರರ ಸಮಕ್ಷಮ ಸಹಿ ಮಾಡಿದ್ದು, ತಾನು ಸದರಿ ಪತ್ರಕ್ಕೆ ಬಿಕ್ಲಂದಾರನಾಗಿ ಸಹಿ ಮಾಡಿರುತ್ತೇನೆಂದು ಪ್ರಮಾಣ ಪತ್ರವನ್ನು ಸಲ್ಲಿಸಿರುವುದು ಕಂಡು ಬಂದಿರುತ್ತದೆ.

**15.** 1 ಮತ್ತು 2ನೇ ಪ್ರತಿವಾದಿಯ ಪರ ವಕೀಲರು ಪಿ.ಡಬ್ಲ್ಯೂ -3 ರವರನ್ನು ಪಾಟೀ ಸವಾಲು ಮಾಡಿದಾಗ ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ ನಾನು 1994-95 ರಿಂದ ಪತ್ರ ಬರಹಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಒಂದು ಪತ್ರ ಬರೆದ ನಂತರ ಸುಮಾರು 10 ವರ್ಷಗಳು ಕಳೆದ ನಂತರ ಅದನ್ನು ಯಾರು ಯಾರಿಗೆ ಬರೆದುಕೊಟ್ಟಿರುತ್ತಾರೆ ಮತ್ತು ಅದರ ವ್ಯವಹಾರ ನನಗೆ ನೆನಪಿರುವುದಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರಿದು ಪತ್ರ ನೋಡಿದರೆ ನಾನು ಹೇಳಬಲ್ಲೆ ಎನ್ನುತ್ತಾರೆ. ನಿ.ಪಿ.1 ಅನ್ನು ವಾದಿ ಬಂದು ನೀಡಿದ ಮಾಹಿತಿಯ ಮೇರೆಗೆ ಮತ್ತು ದಾಖಲಾತಿಗಳ ಮೇರೆಗೆ ಬರೆದಿರುತ್ತೇನೆ. ನಿ.ಪಿ.1 ಅನ್ನು ನೊಂದಣಿಗಾಗಿ ವಾದಿಯೇ ಹಾಜರುಪಡಿಸಿರುತ್ತಾರೆ. ನಿ.ಪಿ.1 ಅನ್ನು ಬರೆದು ಸುಮಾರು 13 ವರ್ಷಗಳು ಕಳೆದಿರುವುದರಿಂದ

ಅದರ ಮೇಲಿರುವ ಸಹಿಗಳನ್ನು ಗುರುತಿಸುವುದು ಕಷ್ಟ ಎಂದರೆ ಸಾಕ್ಷಿ ನನ್ನ ಸಹಿಗಳನ್ನು ಮಾತ್ರ ಗುರುತಿಸಬಲ್ಲೆ ಎನ್ನುತ್ತಾರೆ. ನಿ.ಪಿ.1 ಅನ್ನು ನಾನು ತಯಾರು ಮಾಡಿ ಅದಕ್ಕೆ ಬಿಕ್ಕಂದಾರನಾಗಿ ಸಹಿ ಮಾಡಿರುತ್ತೇನೆ , ನೊಂದಣಿಯನ್ನು ವಾದಿಯೇ ಮಾಡಿಸಿಕೊಂಡಿರುತ್ತಾರೆ ಎಂದು ಉತ್ತರಿರುವುದು ಕಂಡು ಬಂದಿರುತ್ತದೆ.

**16.** ಪ್ರತಿವಾದಿಯರು ತನ್ನ ತಕರಾರಿನಲ್ಲಿ ವಾದಿಯು ತನ್ನ ವಾದಪತ್ರದಲ್ಲಿ ತಿಳಿಸಿರುವಂತಹ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಪ್ರತಿವಾದಿಗಳು ದಾವಾ ಅನುಸೂಚಿತ ಸ್ವತ್ತಿನ ಮಾಲೀಕತ್ವವನ್ನು ಹೊಂದಿದ್ದು, ಅದರ ಸ್ವಾಧೀನಾನುಭವದಲ್ಲಿರುತ್ತಾರೆ. ಪ್ರತಿವಾದಿಗಳು ತಮ್ಮ ಕೌಟುಂಬಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಮತ್ತು ತಾವು ಮಾಡಿಕೊಂಡಿದ್ದ ಸಣ್ಣಪುಟ್ಟ ಸಾಲಗಳನ್ನು ತೀರಿಸಲು ರೂ.2,00,000/- ಕೈಗಡ ಸಾಲ ನೀಡುವಂತೆ ವಾದಿಯನ್ನು ಸಂಪರ್ಕಿಸಿರುತ್ತಾರೆ. ಅದಕ್ಕೆ ವಾದಿಯು ರೂ. 2,00,000/-ಸಾಲ ನೀಡಲು ಒಪ್ಪಿಕೊಂಡಿದ್ದು, ಸದರಿ ಸಾಲದ ಭದ್ರತೆಗಾಗಿ ದಾವಾ ಅನುಸೂಚಿತ ಸ್ವತ್ತನ್ನು ವಾದಿಯ ಪರವಾಗಿ ಅಡಮಾನ ಇಟ್ಟು ಭದ್ರತಾ ದಾಖಲೆಗಳನ್ನು ಬರೆದುಕೊಡುವಂತೆ ಪ್ರತಿವಾದಿಗಳನ್ನು ಒತ್ತಾಯಿಸಿದ್ದರು. ವಾದಿಯ ಸಲಹೆಯ ಮೇರೆಗೆ ಈ ಪ್ರತಿವಾದಿಗಳು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ವಾದಿಯ ಪರವಾಗಿ ನೋಂದಾಯಿತ ಸರಳ ಅಡಮಾನ ಪತ್ರವನ್ನು ಮಾಡಿಕೊಡಲು ಒಪ್ಪಿಕೊಂಡಿದ್ದರು. ಇದಕ್ಕಾಗಿ ವಾದಿಯು ಒಪ್ಪಿಕೊಂಡು ರೂ.1,92,500-00 ಗಳನ್ನು ಪ್ರತಿವಾದಿಗಳಿಗೆ ನೀಡಲಾಗಿದ್ದು, ಈ ಪ್ರತಿವಾದಿಗಳು ಸದರಿ ಸಾಲದ ಮೊತ್ತವನ್ನು ಸರಳ ಬಡ್ಡಿಯೊಂದಿಗೆ ನಿಗದಿತ ಅವಧಿಯೊಳಗೆ ಮರುಪಾವತಿಸಲು ಒಪ್ಪಿಕೊಂಡು ಸ್ವೀಕರಿಸಿ ದಿನಾಂಕ:15.03.2012 ರಂದು ವಾದಿಯ ಪರವಾಗಿ ದಾಖಲೆಯನ್ನು ಬರೆದುಕೊಡಲಾಗಿದೆ. ಸದರಿ ದಾಖಲೆಯು ಕೇವಲ ಸರಳ ಅಡಮಾನ ಪತ್ರವೇ ಹೊರತು ಕ್ರಯದ ಒಪ್ಪಂದದ ಪತ್ರವಾಗಿರುವುದಿಲ್ಲ. ಈ ಪ್ರತಿವಾದಿಗಳು ಮುಗ್ದರಾಗಿದ್ದು, ಅವರಿಗೆ ಓದಲು ಮತ್ತು ಬರೆಯಲು ಹಾಗೂ ದಾಖಲೆಗಳ ವಿಷಯಗಳನ್ನು ಅರ್ಥಮಾಡಿಕೊಳ್ಳಲು ತಿಳಿಯುವುದಿಲ್ಲ. ಪ್ರತಿವಾದಿಗಳು ಸಾಲದ ಭದ್ರತೆಗಾಗಿ ಸರಳ ನೋಂದಾಯಿತ ಅಡಮಾನ ಪತ್ರಕ್ಕೆ ಬರೆದುಕೊಡಲು ಒಪ್ಪಿಕೊಂಡಿದ್ದರೂ ಸಹ, ಪ್ರತಿವಾದಿಯರ ನ್ಯೂನ್ಯತೆಯ ಅನಗತ್ಯ

ಪ್ರಯೋಜನವನ್ನು ಪಡೆದುಕೊಂಡು, ದಾವಾ ಆಸ್ತಿಯನ್ನು ಮಾರಾಟ ಮಾಡಲು ಕ್ರಯದ ಒಪ್ಪಂದದ ರೂಪದಲ್ಲಿ ವಾದಿಯು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ಈ ಪ್ರತಿವಾದಿಗಳು ವಾದಿಯ ಪರವಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಲು ಯಾವುದೇ ನೋಂದಾಯಿತ ಕ್ರಯದ ಒಪ್ಪಂದ ಪತ್ರವನ್ನು ಎಂದಿಗೂ ಮಾಡಿಕೊಟ್ಟಿರುವುದಿಲ್ಲ ಎಂದು ತಮ್ಮ ಪರ ನಿಲುವನ್ನು ತೆಗೆದುಕೊಂಡು ಪ್ರತಿವಾದಿಯರು ಸದರಿ ಅಂಶಗಳನ್ನು ಸಾಬೀತುಪಡಿಸಲು 2ನೇ ಪ್ರತಿವಾದಿಯು ತನ್ನನ್ನು ತಾನು ಡಿ.ಡಬ್ಲ್ಯೂ -1 ಎಂದು ಸಾಕ್ಷ್ಯ ಮಾಡಿಸಿದ್ದು, ತನ್ನ ಮೌಖಿಕ ಸಾಕ್ಷ್ಯವನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು, ತನ್ನ ತಕರಾರಿನಲ್ಲಿರುವ ಅಂಶಗಳನ್ನೇ ತನ್ನ ಪ್ರಮಾಣ ಪತ್ರದಲ್ಲಿ ಪುನರುಚ್ಚರಿಸಿರುತ್ತಾರೆ. ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಶಾನೆ.ಡಿ-1 ರಿಂದ ನಿಶಾನೆ.ಡಿ-5 ರವರೆಗೆ ದಾಖಲಾತಿಗಳನ್ನು ನಿಶಾನಿಸಿರುತ್ತಾರೆ. **ನಿಶಾನೆ.ಡಿ.1** ಎಂ.ಆರ್ ನಂ. MR/2003-04 ಆಗಿದ್ದು, ಸರ್ವೆ ನಂಬರ್ 41/3 ರಲ್ಲಿ 7 ಎಕರೆ ಸ್ವತ್ತನ್ನು 1ನೇ ಪ್ರತಿವಾದಿ ಮತ್ತು ಅವರ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡ ಬಗ್ಗೆ ನಮೂದು ಇರುವುದು ಕಂಡು ಬಂದಿರುತ್ತದೆ. **ನಿಶಾನೆ.ಡಿ.2** 1ನೇ ಪ್ರತಿವಾದಿಯ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, 1ನೇ ಪ್ರತಿವಾದಿಯು ದಿನಾಂಕ 13-07-2020 ರಂದು ಮರಣ ಹೊಂದಿರುವುದು ಕಂಡು ಬಂದಿರುತ್ತದೆ. **ನಿಶಾನೆ.ಡಿ.3** ಎಂ.ಆರ್ ನಂ. MR H9/2020-21 ಆಗಿದ್ದು, 1ನೇ ಪ್ರತಿವಾದಿಯಿಂದ 2ನೇ ಪ್ರತಿವಾದಿಗೆ ದಾವಾ ಸ್ವತ್ತು ಪೌತಿ ಖಾತೆ ಆಧಾರದ ಮೇರೆಗೆ ವರ್ಗಾವಣೆಯಾಗಿರುವುದು ಕಂಡು ಬಂದಿರುತ್ತದೆ. **ನಿಶಾನೆ.ಡಿ.4** ಎಂ.ಆರ್ ನಂ. MR H18/2021-22 ಆಗಿದ್ದು, 1ನೇ ಪ್ರತಿವಾದಿಯಿಂದ 2ನೇ ಪ್ರತಿವಾದಿಗೆ ದಾವಾ ಸ್ವತ್ತು ಪೌತಿ ಖಾತೆ ಆಧಾರದ ಮೇರೆಗೆ ಪೋಡಿಯಾಗಿ ಸರ್ವೆನಂಬರ್ 41/10 ಎಂದು ವರ್ಗಾವಣೆಯಾಗಿರುವುದು ಕಂಡುಬಂದಿರುತ್ತದೆ. **ನಿಶಾನೆ.ಡಿ.5 ದಾವಾ ಸ್ವತ್ತಿನ** ಪಹಣಿ ಪತ್ರಿಕೆಯಾಗಿದ್ದು, ದಾವಾ ಸ್ವತ್ತು 2ನೇ ಪ್ರತಿವಾದಿಯ ಹೆಸರಿಗೆ ಸರ್ವೆ ನಂಬರ್ 41/10 ಎಂದು ಪೋಡಿಯಾಗಿ ನಮೂದು ಇರುವುದು ಕಂಡು ಬಂದಿರುತ್ತದೆ.

**17.** ವಾದಿ ಪರ ವಕೀಲರು ಡಿ.ಡಬ್ಲ್ಯೂ -1 ರವರನ್ನು ಪಾಟೀ ಸವಾಲು ಮಾಡಿದ್ದು, ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ 1ನೇ ಪ್ರತಿವಾದಿ ನನ್ನ ಗಂಡ ಎಂದರೆ ಸರಿ. 1ನೇ

ಪ್ರತಿವಾದಿಯು ಈಗ ಮರಣ ಹೊಂದಿರುತ್ತಾರೆ ಎಂದರೆ ಸರಿ. ಪ್ರತಿವಾದಿ 1(ಎ) ಮತ್ತು 1(ಬಿ) ರವರು ನನ್ನ ಮಕ್ಕಳು ಎಂದರೆ ಸರಿ. ನಾನು ಮತ್ತು ನನ್ನ ಗಂಡನಾದ 1ನೇ ಪ್ರತಿವಾದಿಯು ಸೇರಿ ವಾದಿಗೆ ದಿ: 15-03-2012 ರಂದು ನೊಂದಾಯಿತ ಕ್ರಯ ಕಾರಾರುಪತ್ರವನ್ನು ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನಿ.ಪಿ.1 ರ ಕ್ರಯ ಕಾರಾರುಪತ್ರಕ್ಕೆ, ನಾನು ಸಹಿ ಮಾಡಿಕೊಟ್ಟಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.1 ರಂತೆ ಕ್ರಯ ಕಾರಾರುಪತ್ರ ಮಾಡುವಾಗ ಸಾಕ್ಷಿದಾರರ ಸಮಕ್ಷಮ ವಾದಿಯಿಂದ ಕ್ರಯಕರಾರಿನ ಸಂಪೂರ್ಣ ಹಣವಾದ ರೂ.1,92,500/- ಗಳನ್ನು ನಾನು ಮತ್ತು 1ನೇ ಪ್ರತಿವಾದಿಯು ನನ್ನ ಗಂಡ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.1 ರ ಕ್ರಯ ಕಾರಾರುಪತ್ರವನ್ನು ನಾವು ಮಾಡಿಕೊಳ್ಳುವಾಗ ಎಲ್ಲಾ ದಾಖಲಾತಿಗಳನ್ನು ಹೊಂದಿಸಿಕೊಕೊಳ್ಳಲು ಸುಮಾರು 18 ತಿಂಗಳಗಳ ಕಾಲ ಸಮಯಾವಕಾಶವನ್ನು ಪಡೆದುಕೊಂಡಿದ್ದೆವು ಎಂದರೆ ಸರಿಯಲ್ಲ. ನಿ.ಪಿ.1 ರ ಕ್ರಯ ಕಾರಾರುಪತ್ರವನ್ನು ಮಾಡಿಕೊಂಡ ನಂತರ ಕ್ರಯಪತ್ರವನ್ನು ಮಾಡಿಕೊಳ್ಳುವ ಸಂದರ್ಭದಲ್ಲಿ ದಾವಾ ಸ್ವತ್ತನ್ನು ವಾದಿಗೆ ಸ್ವಾಧೀನಕ್ಕೆ ನೀಡುವುದಾಗಿ ಒಪ್ಪಿದ್ದೆವು ಎಂದರೆ ಸರಿಯಲ್ಲ. ವಾದಿಯು ಸಾಕಷ್ಟು ಬಾರಿ ನಮ್ಮ ಬಳಿ ಬಂದು ನಿ.ಪಿ.1 ರಂತೆ ಕ್ರಯಪತ್ರವನ್ನು ಮಾಡಿಕೊಡುವಂತೆ ನಮ್ಮನ್ನು ಕೇಳಿದ್ದರು ಎಂದರೆ ಸಾಕ್ಷಿಯು ವಾದಿಯು ನಮ್ಮ ಮನೆಯ ಬಳಿ ಬಂದಿರುವುದಿಲ್ಲ,ಎಂದು ನುಡಿಯುತ್ತಾರೆ. ಕ್ರಯಪತ್ರ ಮಾಡಿಕೊಡುವಾಗ 1ನೇ ಪ್ರತಿವಾದಿ ಮತ್ತು ನಾನು ನಮ್ಮ ಮಕ್ಕಳೊಂದಿಗೆ ಬಂದು ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ದಾವಾ ಸ್ವತ್ತನ್ನು ವಾದಿಗೆ ಕ್ರಯ ಮಾಡಿಕೊಡುವುದಾಗಿಯೂ ಸಹ ತಿಳಿಸಿದ್ದೆವು ಎಂದರೆ ಸರಿಯಲ್ಲ. ವಾದಿಯು ನಿ.ಪಿ.1 ರ ಕ್ರಯ ಕಾರಾರಿನಂತೆ ನಡೆದುಕೊಳ್ಳಲು ಸದಾ ಸಿದ್ದ ಮತ್ತು ಇಚ್ಛೆಯುಳ್ಳವರಾಗಿದ್ದು ನಮ್ಮ ಬಳಿ ಬಂದು ಕ್ರಯಪತ್ರ ಮಾಡಿಕೊಡುವಂತೆ ಕೇಳಿಕೊಂಡಿದ್ದರು ಎಂದರೆ ಸಾಕ್ಷಿಯು ವಾದಿಯು ನಮ್ಮ ಮನೆಯ ಬಳಿ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಈ ವಿಚಾರವಾಗಿ ವಾದಿಯು ತನ್ನ ವಕೀಲರ ಮೂಲಕ ನಿ.ಪಿ.2 ರಂತೆ ನಮಗೆ ಕಾನೂನು ತಿಳುವಳಿಕೆ ಪತ್ರವನ್ನು ಸಹ ನೀಡಿದ್ದರು ಎಂದರೆ ಸರಿಯಲ್ಲ, ಸದರಿ ಕಾನೂನು ತಿಳುವಳಿಕೆ ಪತ್ರವು ನಮಗೆ ತಲುಪಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ.5 ರಂತೆ ನನಗೆ ಕಾನೂನು ತಿಳುವಳಿಕೆ ಪತ್ರ ಜಾರಿಯಾಗಿದ್ದರೂ ಸಹ ನನಗೆ ಕಾನೂನು ತಿಳುವಳಿಕೆ ಪತ್ರ ಜಾರಿಯಾಗಿರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ರ ಕ್ರಯ

ಕಾರಾರುಪತ್ರದಂತೆ ನಡೆದುಕೊಳ್ಳುವಂತೆ ನೋಟೀಸ್ ನೀಡಿದ ನಂತರವೂ ನಮ್ಮ ಬಳಿ ಬಂದು ಕ್ರಯಪತ್ರ ಮಾಡಿಕೊಡುವಂತೆ ಕೇಳಿಕೊಂಡಿದ್ದರು ಎಂದರೆ ಸಾಕ್ಷಿಯು ಅವರು ಬಂದಾಗ ನಾವು ಮಾಡಿಕೊಡುವುದಿಲ್ಲ ಎಂದು ಹೇಳಿ ಕಳುಹಿಸಿರುತ್ತೇವೆ ಎಂದು ನುಡಿಯುತ್ತಾರೆ. ನಾವು ನಿ.ಪಿ.1 ರಂತೆ ಕ್ರಯಪತ್ರವನ್ನು ಮಾಡಿಕೊಳ್ಳುವಾಗ ದಾವಾ ಸ್ವತ್ತಿನ ಸ.ನಂ: 41/3 ಎಂದು ಇತ್ತು ಎಂದರೆ ಸರಿ. ಈಗ ದಾವಾ ಸ್ವತ್ತಿನ ಸ.ನಂ: ಹೊಸದಾಗಿ 41/10 ಎಂದು ಬದಲಾವಣೆಯಾಗಿರುತ್ತದೆ ಎಂದರೆ ಸರಿ. ವಾದಿಗೆ ನಿ.ಪಿ.1 ರಂತೆ ಕ್ರಯ ಕಾರಾರುಪತ್ರವನ್ನು ಮಾಡಿಕೊಟ್ಟಿದ್ದು. ಆದರೆ ನಾನು ನಮ್ಮ ಪ್ರತಿವಾದ ಪತ್ರದಲ್ಲಿ ವಾದಿಯಿಂದ ಕಾನೂನು ಅವಶ್ಯಕತೆಗಾಗಿ ಸಾಲವನ್ನು ಪಡೆದುಕೊಂಡಿದ್ದು ಮಾರಾಟ ಮಾಡುವುದಕ್ಕಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಉತ್ತರಿಸಿ, ವಾದಿ ಪರ ವಕೀಲರ ಎಲ್ಲಾ ಪ್ರಶ್ನೆಗಳನ್ನು ಅಲ್ಲಗಳೆದಿರುವುದು ಕಂಡು ಬಂದಿರುತ್ತದೆ.

**18**. ಉಭಯ ಪಕ್ಷಗಾರರ ಸಾಕ್ಷಿ ವಿಚಾರಣೆ ಮತ್ತು ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಪಿ.ಡಬ್ಲ್ಯೂ .-1ರವರು ಹಾಜರುಪಡಿಸಿದ ನಿಶಾನೆ.ಪಿ-1ಕ್ರಯದ ಕಾರಾರು ಪತ್ರ ಎನ್ನುವ ಶೀರ್ಷಿಕೆ ಅಡಿಯಲ್ಲಿ ಬರೆದಿರುವ ದಾಖಲೆಯಾಗಿರುತ್ತದೆ. ಸದರಿ ದಾಖಲಾತಿಯಿಂದ ಸ್ಪಷ್ಟವಾಗುವುದೇನೆಂದರೆ 1 ಮತ್ತು 2 ನೇ ಪ್ರತಿವಾದಿಯರು ವಾದಿಯ ಪರವಾಗಿ ದಾವಾ ಸ್ವತ್ತನ್ನು ರೂ.1,92,500/- ಗಳಿಗೆ ಮಾರಾಟ ಮಾಡುವುದಾಗಿ ಒಪ್ಪಿ ಸಾಕ್ಷಿದಾರರ ಸಮಕ್ಷಮ ಕ್ರಯದ ಮೊಬಲಗು ಪೂರ ಹಣ ರೂ.1,92,500/- ಗಳನ್ನು ಮುಂಗಡವಾಗಿ ಪಡೆದುಕೊಂಡಿರುತ್ತಾರೆಂದು ಹಾಗೂ ಸದರಿ ಸ್ವತ್ತಿನ ಕ್ರಯಪತ್ರ ನೊಂದಣಿಯಾಗಲು ಎಲ್ಲಾ ದಾಖಲಾತಿಗಳನ್ನು ಒದಗಿಸಿಕೊಂಡು 18 ತಿಂಗಳ ಒಳಗಾಗಿ ನಿಮಗೆ ಕ್ರಯಕ್ಕೆ ಕೊಡಲು ಗೊತ್ತು ಮಾಡಿರುವ ಜಮೀನಿಗೆ ಸಂಬಂಧಪಟ್ಟ ಖಾತೆ, ಪಹಣಿ, ವಂಶವೃಕ್ಷ ಎಂ.ಆರ್. ಕಾಪಿ ಹಾಗೂ ಬ್ಯಾಂಕಿನಲ್ಲಿ ಸದರಿ ಜಮೀನಿಗೆ ಇರುವ ಸಾಲ ತೀರುವಳಿ ಮಾಡಿ ಬ್ಯಾಂಕಿನ ತೀರುವಳಿ ಪತ್ರ ಹಾಗೂ ಸಾಲ ಖುಲಾಸೆ ಪತ್ರ ಮತ್ತು ಬ್ಯಾಂಕಿಗೆ ಸಾಲಕ್ಕೋಸ್ಕರವಾಗಿ ಈ ಜಮೀನಿಗೆ ಸಂಬಂಧಪಟ್ಟ ಇತರೆ ಎಲ್ಲಾ ವರ್ಜಿನಲ್ ದಾಖಲೆಗಳನ್ನು ನಿಮಗೆ ಕೊಟ್ಟು ನಿಮ್ಮ ಹೆಸರಿಗೆ ಕ್ರಯಪತ್ರ ಮಾಡಿಕೊಡಲು ಒಪ್ಪಿರುವುದಾಗಿ ಹಾಗೂ ಸದರಿ ಸ್ವತ್ತಿನ ಸ್ವಾಧೀನಾನುಭವವನ್ನು ಕ್ರಯಪತ್ರ ನೊಂದಣಿಯ ದಿವಸ ನಿಮಗೆ ವಹಿಸಿಕೊಡಲು ಒಪ್ಪಿರುತ್ತೇವೆಂದು

ಒಕ್ಕಣೆಯೊಂದಿಗೆ ಸದರಿ ದಾಖಲೆಯು ಬರೆಯಲ್ಪಟ್ಟಿರುವುದು ಕಂಡುಬಂದಿರುತ್ತದೆ. ಸದರಿ ದಾಖಲೆಯಲ್ಲಿ ವಾದಿ ಮತ್ತು 1 ಮತ್ತು 2 ನೇ ಪ್ರತಿವಾದಿಯರು ಸಹಿ ಮಾಡಿರುತ್ತಾರೆಂದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ. ಆದರೆ 1 ಮತ್ತು 2ನೇ ಪ್ರತಿವಾದಿಯರು ವಾದಿಯ ದಾವಾಂಶಗಳನ್ನು ಅಲ್ಲಗಳೆದಿದ್ದು, 1 ಮತ್ತು 2ನೇ ಪ್ರತಿವಾದಿಯರು ನಿರ್ಧಿಷ್ಟವಾದ ನಿಲುವು ಏನೆಂದರೆ ವಾದಿಯಿಂದ ತಾನು ರೂ.1,92,500/- ಗಳನ್ನು ಸಾಲವಾಗಿ ಪಡೆದು ಸದರಿ ಸಾಲದ ಹಣದ ಭದ್ರತೆಗಾಗಿ ವಾದಿಯು 1 ಮತ್ತು 2ನೇ ಪ್ರತಿವಾದಿಗಳಿಂದ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸರಳ ಅಡಮಾನ ಪತ್ರವನ್ನು ಬರೆಸಿಕೊಂಡಿರುವುದಾಗಿ ತಿಳಿರುತ್ತಾರೆ. ಸದರಿ ಸಾಲಕ್ಕೆ ಸರಳ ಬಡ್ಡಿ ಯೊಂದಿಗೆ ಹಿಂತಿರುಗಿಸುವುದಾಗಿ ಪ್ರತಿವಾದಿಯರು ಒಪ್ಪಿದ್ದರು. ಹೀಗಿದ್ದರೂ ಸಹ ವಾದಿಯು ನಿಶಾನೆ.ಪಿ-1ರ ದಾಖಲಾತಿಯನ್ನು ಸೃಷ್ಟಿಸಿ ಪ್ರತಿವಾದಿಗಳಿಂದ ಅನ್ಯತಾ ಲಾಭ ಪಡೆಯುವ ದುರುದ್ದೇಶದಿಂದ ಈ ದಾವೆಯನ್ನು ಪ್ರತಿವಾದಿಗಳ ವಿರುದ್ದ ದಾಖಲಿಸಿರುತ್ತಾರೆಂದು ತಮ್ಮ ಪರ ನಿಲುವನ್ನು ತೆಗೆದುಕೊಂಡಿರುತ್ತಾರೆ.

**19.** ಈ ಸಂಬಂಧವಾಗಿ ಪಿ.ಡಬ್ಲ್ಯೂ -1ರವರನ್ನು ಪ್ರತಿವಾದಿಯರ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಪಿ.ಡಬ್ಲ್ಯೂ -1ರವರು ತಮ್ಮ ಪಾಟೀ ಸವಾಲಿನಲ್ಲಿ ತಾನು 15 ವರ್ಷಗಳಿಂದ ಮನಿ ಲೆಂಡಿಂಗ್ ವ್ಯವಹಾರವನ್ನು ಮಾಡುತ್ತಿದ್ದೆ ಎಂಬುದನ್ನು ಒಪ್ಪಿರುತ್ತಾರೆ. ಮುಂದುವರೆದು 1 ನೇ ಪ್ರತಿವಾದಿಯ ತಂದೆ ಹೆಸರು ಗೊತ್ತಿಲ್ಲವೆಂದು ಹಾಗೂ 1ನೇ ಪ್ರತಿವಾದಿಯ ಕುಟುಂಬದ ಬಗ್ಗೆ ನನಗೆ ತಿಳಿದಿಲ್ಲವೆನ್ನುತ್ತಾರೆ. ದಾವಾ ಸ್ವತ್ತಾದ ಸರ್ವೆ ನಂ. 41/3 ರಲ್ಲಿ 1 ನೇ ಪ್ರತಿವಾದಿಗೆ ಸೇರಿದ ಭಾಗ ಎಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ, ನಾನು ಸದರಿ ಜಮೀನನ್ನು ನೋಡಿರುವುದಿಲ್ಲ. ನಿಶಾನೆ.ಪಿ-1ನ್ನು 1ಮತ್ತು 2ನೇ ಪ್ರತಿವಾದಿಯರಿಗೆ ಬರೆದುಕೊಡಲು ಹಕ್ಕಿರಲಿಲ್ಲ ಎಂದರೆ ಸರಿ ಎಂದು ಉತ್ತರಿಸಿರುವುದು ಕಂಡುಬಂದಿರುತ್ತದೆ. ಸಾಮಾನ್ಯವಾಗಿ ಯಾವುದಾದರು ಒಂದು ಸ್ವತ್ತನ್ನು ಖರೀದಿಸುವಾಗ ಖರೀದಿ ಮಾಡುವವರು ಸದರಿ ಸ್ವತ್ತನ್ನು ನೋಡಿ ಸದರಿ ಸ್ವತ್ತು ಯಾರಿಗೆ ಸೇರಿದ್ದು, ಅವರ ಕುಟುಂಬದ ಸದಸ್ಯರು ಯಾರು, ಯಾರಿಗೆಲ್ಲಾ ಸದರಿ ಸ್ವತ್ತಿನ ಮೇಲೆ ಹಕ್ಕಿದೆ ಎಂಬುದನ್ನೆಲ್ಲಾ ಪರಿಶೀಲಿಸಿ ದಾಖಲಾತಿಗಳನ್ನು ನೋಡಿ ಖರೀದಿಸಬೇಕಾಗಿರುತ್ತದೆ. ಆದರೆ ಈ ದಾವೆಯಲ್ಲಿ ವಾದಿಯು

ದಾವಾ ಸ್ವತ್ತನ್ನು ನೋಡದೆ ಪ್ರತಿವಾದಿಯರ ಕುಟುಂಬದ ಬಗ್ಗೆ ತಿಳಿದುಕೊಳ್ಳದೆ ಹಾಗೂ ನಿಶಾನೆ.ಪಿ-1 ನ್ನು 1ಮತ್ತು 2ನೇ ಪ್ರತಿವಾದಿಯರಿಗೆ ಬರೆದುಕೊಡಲು ಹಕ್ಕಿರಲಿಲ್ಲ ಎಂದ ಮೇಲೆ ದಾವಾ ಸ್ವತ್ತನ್ನು ಖರೀದಿಸಲು ಹೇಗೆ ಸಾದ್ಯ ಎಂಬುದಾಗಿರುತ್ತದೆ. ವಾದಿಯು ತನ್ನ ಪಾಟೀ ಸವಾಲಿನಲ್ಲಿ ದಾವಾ ಸ್ವತ್ತನ್ನು ಮಾರಾಟ ಮಾಡಲು 1ನೇ ಪ್ರತಿವಾದಿ ಮತ್ತು ತನ್ನ ನಡುವೆ 2 ಲಕ್ಷ ರೂಪಾಯಿಗಳಿಗೆ ವ್ಯವಹಾರವಾಗಿದ್ದು, ಅದರಲ್ಲಿ ರೂ.1,92,500/- ಗಳನ್ನು 1ನೇ ಪ್ರತಿವಾದಿಗೆ ನೀಡಿರುತ್ತೇನೆ. ಸದರಿ ಹಣವನ್ನು ತನ್ನ ಅಂಗಡಿಯಲ್ಲಿ ನೀಡಿದ್ದು, ಆ ಸಮಯದಲ್ಲಿ ಯಾರೂ ಇರಲಿಲ್ಲ 1ನೇ ಪ್ರತಿವಾದಿ ಒಬ್ಬರೇ ಬಂದಿದ್ದರು ಉತ್ತರಿಸಿದ್ದು, ಈ ಬಗ್ಗೆ ವಾದಿಯ ವಾದಪತ್ರವನ್ನು ಮತ್ತು ನಿಶಾನೆ.ಪಿ-1ರ ಕ್ರಯ ಕರಾರು ಪತ್ರವನ್ನು ಪರಶೀಲಿಸಿ ನೋಡಿದಾಗ ವಾದಿಯು 1 ಮತ್ತು 2ನೇ ಪ್ರತಿವಾದಿಯರು ದಾವಾ ಸ್ವತ್ತನ್ನು ರೂ.1,92,500/- ಗಳಿಗೆ ಮಾರಾಟ ಮಾಡಲು ಒಪ್ಪಿದ್ದು, ಸದರಿ ಪ್ರತಿಫಲದ ಪೂರ ಹಣವಾದ ರೂ.1,92,500/- ಗಳನ್ನು 1 ಮತ್ತು 2ನೇ ಪ್ತತಿವಾದಿಯರಿಗೆ ಸಾಕ್ಷಿಧಾರರ ಸಮಕ್ಷಮ ನೀಡಿರುವುದಾಗಿ ತಿಳಿಸಿರುವುದು ಕಂಡುಬಂದಿರುತ್ತದೆ. ಆದರೆ ವಾದಿಯು ತನ್ನ ಪಾಟೀ ಸವಾಲಿನಲ್ಲಿ 2 ಲಕ್ಷ ಹಣಕ್ಕೆ ವ್ಯವಹಾರವಾಗಿದ್ದ ಬಗ್ಗೆಯಾಗಲೀ ಅಥವಾ 1ನೇ ಪ್ರತಿವಾದಿಗೆ ಯಾರೂ ಇಲ್ಲದಿದ್ದಾಗ ತನ್ನ ಅಂಗಡಿಯಲ್ಲಿ ಹಣ ನೀಡಿದ ಬಗ್ಗೆಯಾಗಲೀ ಅಥವಾ ಉಳಿದ ಹಣದ ಬಗ್ಗೆಯಾಗಲೀ ನಮೂದಿಸಿಲ್ಲದಿರುವುದು ಕಂಡುಬಂದಿದ್ದು, ವಾದಿಯ ವಾದ ಪತ್ರದಲ್ಲಿನ ಅಂಶಗಳಿಗೂ, ನಿಶಾನೆ.ಪಿ-1 ರ ಒಕ್ಕಣೆಗಳಿಗೂ ಹಾಗೂ ತನ್ನ ಪಾಟೀ ಸವಾಲಿನಲ್ಲಿ ಹೇಳಿದ ಹೇಳಿಕೆಗೂ ಒಂದಕ್ಕೊಂದು ತಾಳೆ ಇಲ್ಲದಿರುವುದು ಕಂಡುಬಂದಿರುತ್ತದೆ.

**20.** ಸದರಿ ಅಂಶಗಳನ್ನು ಗಮನಿಸಿದರೆ, ಪ್ರತಿವಾದಿಯರು ತಿಳಿಸಿದಂತೆ ವಾದಿಯು ಲೇವಾದೇವಿ ವ್ಯವಹಾರ ಮಾಡುತ್ತಿದ್ದು, 1ನೇ ಪ್ರತಿವಾದಿಗೆ ಸದರಿ ಹಣವನ್ನು ತನ್ನ ಅಂಗಡಿಯಲ್ಲಿ ಯಾರೂ ಇಲ್ಲದಿದ್ದಾಗ ಸಾಲವಾಗಿ ನೀಡಿ, ಸದರಿ ಸಾಲದ ಭದ್ರತೆಗಾಗಿ ದಾವಾ ಸ್ವತ್ತನ್ನು ತನ್ನ ಹೆಸರಿಗೆ ಈ ದಾಖಲೆಯ ಮೂಲಕ ಬರೆಸಿಕೊಂಡಿರುವುದು ಕಂಡುಬಂದಿರುತ್ತದೆ. ಆದ್ದರಿಂದಲೇ ವಾದಿಗೆ ದಾವಾ ಸ್ವತ್ತು ಎಲ್ಲಿ ಬರುತ್ತದೆಂದು ನೋಡಿಲ್ಲದಿರುವುದು ಕಂಡುಬಂದಿರುತ್ತದೆ. ಒಂದು ವೇಳೆ ವಾದಿಯು ದಾವಾ ಸ್ವತ್ತನ್ನು ಖರೀದಿಸುವ ಸಲುವಾಗಿ ಕ್ರಯದ ಕರಾರು ಪತ್ರವನ್ನು ಮಾಡಿಸಿಕೊಳ್ಳುವ

ಉದ್ದೇಶ ಇದ್ದಿದ್ದೇ ಆಗಿದ್ದರೆ, ದಾವಾ ಸ್ವತ್ತನ್ನು ನೋಡಿ ಅದರ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸಿ ನಂತರ ಸಾಕ್ಷಿದಾರರ ಸಮ್ಮುಖದಲ್ಲಿ ಕ್ರಯದ ಹಣವನ್ನು ನೀಡುತ್ತಿದ್ದರು, ಆದರೆ ವಾದಿಯು ಈ ಯಾವ ಪರಯತ್ನಗಳನ್ನೂ ಮಾಡದೇ ಇರುವುದನ್ನು ನೋಡಿದರೆ ನಿಶಾನೆ.ಪಿ-1ರ ಕ್ರಯ ಕರಾರುಪತ್ರವನ್ನು ಮಾಡಿಕೊಂಡಿರುವುದಿಲ್ಲವೆಂಬುದು ಕಂಡುಬಂದಿರುತ್ತದೆ. ವಾದಿಯು ತನ್ನ ವಾದಪತ್ರದಲ್ಲಿ ತಿಳಿದಂತೆ ಪ್ರತಿವಾದಿಯರು ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿ ನಿಶಾನೆ.ಪಿ-1 ರಂತೆ ಕ್ರಯದ ಕರಾರುಪತ್ರವನ್ನು ಸಾಕ್ಷಿದಾರರ ಸಮಕ್ಷಮ ಕ್ರಯದ ಮೊಬಲಗು ಪೂರಾ ಹಣ ರೂ.1,92,500/- ಗಳನ್ನು ಪಡೆದು ಬರೆದುಕೊಟ್ಟಿದ್ದೆ ಆಗಿದ್ದರೇ ವಾದಿಯು ತನ್ನ ಪರ ಸಾಕ್ಷಿದಾರರನ್ನಾಗಿ ಕರೆಸಿದ ಪಿ.ಡಬ್ಲ್ಯೂ -2 ರವರು ಸದರಿ ವಿಚಾರಗಳ ಬಗ್ಗೆ ಸಾಕ್ಷಿ ನುಡಿಯಬೇಕಾಗಿತ್ತು, ಆದರೆ ಪಿ.ಡಬ್ಲ್ಯೂ -2 ರವರು ತಮ್ಮ ಪಾಟೀಸವಾಲಿನಲ್ಲಿ ವಾದಿಯು ತನ್ನ ಮಾವನಾಗಿದ್ದು, 2ನೇ ಪ್ರತಿವಾದಿಯನ್ನು ತಾನು ನೋಡಿರುವುದಿಲ್ಲವೆಂದು ಹಾಗೂ ತನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರಗಳನ್ನು ನಾನು ಹೇಳಿ ಬರೆಸಿಲ್ಲವೆಂದು ವಕೀಲರು ಬರೆಸಿದ್ದಕ್ಕೆ ತಾನು ಸಹಿ ಹಾಕಿರುವುದಾಗಿ ಉತ್ತರಿಸಿರುವುದು ಕಂಡುಬಂದಿರುತ್ತದೆ. ಮುಂದುವರೆದು ದಾವಾ ಸ್ವತ್ತನ್ನು ತಾನು ಸಹ ನೋಡಿರುವುದಿಲ್ಲವೆಂದು ಹಾಗೂ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ವಾದಿ ಮತ್ತು ಪ್ರತಿವಾದಿಯರ ನಡುವೆ ಯಾವ ರೀತಿ ಮಾತುಕತೆ ನಡೆದಿರುತ್ತದೆಂದು ತನಗೆ ಗೊತ್ತಿಲ್ಲವೆಂದು, ತನ್ನ ಸಮಕ್ಷಮ ರೂ.1,92,500/- ಗಳನ್ನು 1ನೇ ಪ್ರತಿವಾದಿಯು ಪಡೆದುಕೊಂಡಿರುವುದಿಲ್ಲ ಹಾಗೂ ನಿಶಾನೆ.ಪಿ-1 ರ ಕರಾರುಪತ್ರವನ್ನು ಯಾವ ದಿನಾಂಕದಂದು ಎಷ್ಟು ಸಮಯಕ್ಕೆ ಎಲ್ಲಿ ಬರೆಯಲಾಗಿರುತ್ತದೆ ಎಂದು ತನಗೆ ಗೊತ್ತಿಲ್ಲವೆಂದು ಉತ್ತರಿಸಿರುವುದು ಕಂಡು ಬಂದಿರುತ್ತದೆ. ಪಿ.ಡಬ್ಲ್ಯೂ -2 ರವರ ಸದರಿ ಹೇಳಿಕೆಗಳನ್ನು ಗಮನಿಸಿದರೆ ವಾದಿಯು ತನ್ನ ವಾದಪತ್ರದಲ್ಲಿ ತಿಳಿಸಿರುವಂತೆ ವಾದಿ ಮತ್ತು ಪ್ರತಿವಾದಿಯರ ನಡುವೆ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಯಾವುದೇ ಕ್ರಯದ ವ್ಯವಹಾರ ಆಗಿಲ್ಲದೇ ಇರುವುದು ಕಂಡುಬಂದಿರುತ್ತದೆ. ಆದ್ದರಿಂದಲೇ ನಿಶಾನೆ.ಪಿ-1 ಕ್ಕೆ ಸಾಕ್ಷಿದಾರರೆಂದು ಸಹಿ ಹಾಕಿರುವ ಪಿ.ಡಬ್ಲ್ಯೂ -2 ರವರಿಗೆ ಸದರಿ ವ್ಯವಹಾರದ ಬಗ್ಗೆ ತಿಳಿದಿಲ್ಲದಿರುವುದು ಕಂಡುಬಂದಿರುತ್ತದೆ. ನಿಶಾನೆ.ಪಿ-1 ಅನ್ನು ಕ್ರಯದ ಕರಾರುಪತ್ರವಾಗಿ ಸಾಕ್ಷಿದಾರರ ಸಮಕ್ಷಮ ಬರೆಸಿಕೊಂಡಿದ್ದೇ ಆಗಿದ್ದರೆ ಪಿ.ಡಬ್ಲ್ಯೂ -2 ರವರು ನಿಶಾನೆ.ಪಿ-1 ರ ಒಕ್ಕಣೆಗೆ

ತಕ್ಕಂತೆ ಸತ್ಯಾಂಶಗಳನ್ನು ನುಡಿಯುತ್ತಿದ್ದರು. ಆದರೆ ನಿಶಾನೆ.ಪಿ-1 ರ ದಾಖಲೆಯನ್ನು ಕ್ರಯದ ಕರಾರುಪತ್ರವಾಗಿ ಬರೆಸಿಕೊಂಡಿಲ್ಲದೇ ಇರುವುದರಿಂದಲೇ ಹಾಗೂ ವಾದಿ ಹಾಗೂ ಪ್ರತಿವಾದಿಯರ ನಡುವೆ ಯಾವುದೇ ಕ್ರಯದ ವ್ಯವಹಾರ ಆಗಿಲ್ಲದೇ ಇರುವುದರಿಂದಲೇ ಸಾಕ್ಷಿದಾರರಾದ ಪಿ.ಡಬ್ಲೂ - 2 ರವರಿಗೆ ಸದರಿ ವ್ಯವಹಾರದ ಬಗ್ಗೆ ಮಾಹಿತಿ ಇಲ್ಲದಿರುವುದು ಕಂಡುಬಂದಿರುತ್ತದೆ. ವಾದಿಯೇ ಒಪ್ಪಿಕೊಂಡಂತೆ 1ನೇ ಪ್ರತಿವಾದಿಗೆ ತನ್ನ ಅಂಗಡಿಯಲ್ಲಿ ರೂ.1,92,500/- ಗಳನ್ನು ಸಾಲವಾಗಿ ನೀಡಿ ಸದರಿ ಸಾಲದ ಭದ್ರತೆಗಾಗಿ ನಿಶಾನೆ.ಪಿ-1 ರ ದಾಖಲೆಯನ್ನು ಬರೆಸಿಕೊಂಡಿರುವುದು ಕಂಡುಬಂದಿರುತ್ತದೆ.

**21.** ವಾದಿಯ ಪರ ಗುರುತಿಸಿಕೊಂಡಿರುವ ಮತ್ತೊಬ್ಬ ಸಾಕ್ಷಿದಾರರಾದ ಪಿ.ಡಬ್ಲೂ -3 ರವರು ನಿಶಾನೆ.ಪಿ-1 ರ ಪತ್ರ ಬರಹಗಾರರಾಗಿದ್ದು, ಸದರಿ ದಾಖಲೆಗೆ ಬಿಕ್ಲಂದಾರರಾಗಿ ಸಹಿ ಮಾಡಿರುವುದಾಗಿ ತಿಳಿಸಿದ್ದು, ಸದರಿಯವರೂ ಸಹ ತಮ್ಮ ಪಾಟೀಸವಾಲಿನಲ್ಲಿ ಪತ್ರ ಬರೆದು 10 ವರ್ಷಗಳಾಗಿರುವುದರಿಂದ ಅದನ್ನು ಯಾರು ಬರೆದುಕೊಟ್ಟಿರುತ್ತಾರೆಂದು ಮತ್ತು ಅದರ ವ್ಯವಹಾರದ ಬಗ್ಗೆ ತನಗೆ ನೆನಪಿರುವುದಿಲ್ಲವೆಂದು, ನಿಶಾನೆ.ಪಿ-1ನ್ನು ನೋಂದಣಿಗಾಗಿ ವಾದಿಯೇ ಹಾಜರುಪಡಿಸಿರುತ್ತಾರೆ. ಅದರ ಮೇಲಿರುವ ಸಹಿಗಳನ್ನು ಗುರುತಿಸುವುದು ಕಷ್ಟ. ತನ್ನ ಸಹಿಯನ್ನು ಗುರುತಿಸುತ್ತೇನೆ ನೊಂದಣಿಯನ್ನು ವಾದಿಯೇ ಮಾಡಿಸಿಕೊಂಡಿರುತ್ತಾರೆಂದು ಉತ್ತರಿಸಿರುವುದು ಕಂಡುಬಂದಿದ್ದು, ಈ ದಾವೆಯಲ್ಲಿನ ನಿಶಾನೆ.ಪಿ-1 ರ ದಾಖಲೆಯನ್ನು ಕ್ರಯಕರಾರು ಪತ್ರವನ್ನಾಗಿ 1 ಮತ್ತು 2ನೇ ಪ್ರತಿವಾದಿಯರು ಬರೆದುಕೊಟ್ಟಿರುತ್ತಾರೆ ಎಂಬುದಕ್ಕೆ ಸಂಬದಿಸಿದಂತೆ ಸಂಪೂರ್ಣ ಅನುಮಾನಕ್ಕೆ ಎಡೆಮಾಡಿಕೊಡುತ್ತದೆ. ವಾದಿಯು ನಿಶಾನೆ.ಪಿ-1 ರ ದಾಖಲೆಯನ್ನು ತಂದು ತಾನೇ ಅದನ್ನು ನೋಂದಣಿ ಮಾಡಿಸಿಕೊಂಡಿರುವುದಾಗಿ ವಾದಿಯ ಪರ ಸಾಕ್ಷಿಯೇ ಉತ್ತರಿಸಿರುವುದು ಕಂಡುಬಂದಿರುತ್ತದೆ. ವಾದಿಯು ತನ್ನ ಪರ ಸಾಕ್ಷಿದಾರರ ಮೂಲಕ 1 ಮತ್ತು 2 ನೇ ಪ್ರತಿವಾದಿಯರು ವಾದಿಗೆ ದಾವಾ ಸ್ವತ್ತನ್ನು ಕ್ರಯಕ್ಕೆ ಕೊಡಲು ಒಪ್ಪಿ ನಿಶಾನೆ.ಪಿ-1 ರ ದಾಖಲೆಯನ್ನು ಬರೆದುಕೊಟ್ಟಿರುತ್ತಾರೆಂದು ರುಜುವಾತುಪಡಿಸಲು ವಾದಿಯು ವಿಫಲರಾಗಿರುತ್ತಾರೆ. ಆದರೆ 2ನೇ ಪ್ರತಿವಾದಿಯು ತನ್ನನ್ನು ತಾನು ಡಿ.ಡಬ್ಲ್ಯೂ ಃ1 ಎಂದು ಸಾಕ್ಷಿ ವಿಚಾರಣೆಗೊಳಪಡಿಸಿಕೊಂಡಿದ್ದು,

ಸದರಿಯವರನ್ನು ವಾದಿ ಪರ ವಕೀಲರು ಪಾಟೀಸವಾಲು ಮಾಡಿದ್ದು, ಡಿ.ಡಬ್ಲ್ಯೂ -1 ರವರು ತಮ್ಮ ಪಾಟೀಸವಾಲಿನಲ್ಲಿ ಎಲ್ಲಿಯೂ ತಾನು ಮತ್ತು ತನ್ನ ಗಂಡ ನಿಶಾನೆ.ಪಿ-1 ರ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುವುದಾಗಿ ಒಪ್ಪಿಕೊಂಡಿರುವುದಿಲ್ಲ ಹಾಗೂ ವಾದಿ ಪರ ವಕೀಲರ ಎಲ್ಲಾ ಪ್ರಶ್ನೆಗಳನ್ನು ಸ್ಪಷ್ಟವಾಗಿ ಅಲ್ಲಗಳೆದಿರುವುದು ಕಂಡುಬಂದಿರುತ್ತದೆ. 1 ಮತ್ತು 2ನೇ ಪ್ರತಿವಾದಿಯರು ತಮ್ಮ ಪ್ರತಿವಾದಪತ್ರದಲ್ಲಿ ತೆಗೆದುಕೊಂಡಿರುವ ಪ್ರತಿರಕ್ಷಣೆಗೆ ಪೂರಕವಾಗಿ ಪಿ.ಡಬ್ಲ್ಯೂ -1ರಿಂದ ಪಿ.ಡಬ್ಲ್ಯೂ -3 ರವರುಗಳು ಉತ್ತರಿಸಿರುವುದು ಕಂಡುಬಂದಿರುತ್ತದೆ. ಒಟ್ಟಾರೆಯಾಗಿ ವಾದಿಯು ತನ್ನ ವಾದಪತ್ರದಲ್ಲಿ ತಿಳಿಸಿರುವ ಅಂಶಗಳಿಗೂ ಮತ್ತು ನಿಶಾನೆ.ಪಿ-1 ಕ್ರಯದ ಕರಾರುಪತ್ರದಲ್ಲಿ ನಮೂದಿಸಿರುವ ಅಂಶಗಳಿಗೂ ಹಾಗೂ ವಾದಿಯು ತನ್ನ ಪಾಟೀಸವಾಲಿನಲ್ಲಿ ಉತ್ತರಿಸಿರುವುದಕ್ಕೂ ಒಂದಕ್ಕೊಂದು ವ್ಯತ್ಯಾಸದಿಂದ ಕೂಡಿರುವುದು ಕಂಡುಬಂದಿರುತ್ತದೆ. ನಿಶಾನೆ.ಪಿ-1 ರ ದಾಖಲೆಯನ್ನು ವಾದಿಯು ಪ್ರತಿವಾದಿಯರಿಂದ ಹಣದ ಭದ್ರತೆಗಾಗಿ ಬರೆಸಿಕೊಂಡಿರುವ ಸಾಧ್ಯತೆಗಳು ಹೆಚ್ಚಾಗಿ ಕಂಡುಬಂದಿರುತ್ತವೆ. ಆದ್ದರಿಂದ ವಾದಿಯು ತನ್ನ ವಾದ ಪತ್ರದಲ್ಲಿ ತಿಳಿಸಿದಂತೆ 1 ಮತ್ತು 2ನೇ ಪ್ರತಿವಾದಿಯರು ದಾವಾಸ್ವತ್ತನ್ನು ಮಾರಾಟ ಮಾಡಲು ಒಪ್ಪಿ ತನ್ನಿಂದ ಕ್ರಯದ ಮೊಬಲಗು ಪೂರಾ ಪ್ರತಿಫಲ ರೂ.1,92,500/- ಗಳನ್ನು ಪಡೆದು ನಿಶಾನೆ.ಪಿ-1 ರಂತೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದರು ಎಂಬುದನ್ನು ಸಾಕ್ಷ್ಯಾಧಾರಗಳಿಂದ ರುಜುವಾತುಪಡಿಸಲು ವಿಫಲರಾಗಿರುವುದು ಕಂಡುಬಂದಿರುತ್ತದೆ.

**22.** ಕರಾರಿನ ನಿರ್ದಿಷ್ಟ ನೆರವೇರಿಕೆಯ ಪರಿಹಾರದ ದಾವೆಗಳಲ್ಲಿ ಕ್ರಯ ಕರಾರು ಪತ್ರವನ್ನು ರುಜುವಾತುಪಡಿಸುವುದರ ಜೊತೆಗೆ ಕರಾರಿಗೆ ಒಳಪಟ್ಟ ಆಸ್ತಿಯನ್ನು ತಾನು ಇಚ್ಛೆಯನ್ನು ಮತ್ತು ಸಾಮರ್ಥ್ಯವನ್ನು ರುಜುವಾತುಪಡಿಸುವ ಹೊಣೆಗಾರಿಕೆ ವಾದಿಯ ಮೇಲಿರುತ್ತದೆ. ಆದರೆ ಈ ದಾವೆಯಲ್ಲಿ ಕ್ರಯ ಕರಾರು ಪತ್ರದ ಉಲ್ಲೇಖದಂತೆ 1 ಮತ್ತು 2ನೇ ಪ್ರತಿವಾದಿಯರು ವಾದಿಯಿಂದ ರೂ.1,92,500/- ಪಡೆದು ಕ್ರಯ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆಂಬ ಸಂಗತಿಯನ್ನು ನಂಬಲರ್ಹವಾದ ಸಾಕ್ಷ್ಯಾಧಾರಗಳಿಂದ ಸಾಭೀತುಪಡಿಸಲು ವಾದಿಯು ವಿಫಲರಾಗಿರುವುದು ಕಂಡುಬಂದಿರುತ್ತದೆ. ಈ ಮೇಲ್ಕಂಡ ಅಂಶಗಳನ್ನು ಪರಿಗಣಿಸಿ **ನಿರ್ದಿಷ್ಟ ಕರಾರಿನ ಅಧಿನಿಯಮ ಕಲಂ 20ರ** ಅಡಿಯಲ್ಲಿ ವಿವೇಚನಾ ಅಧಿಕಾರವನ್ನು ಪಡೆಯಲು ವಾದಿಯು ಅರ್ಹರಿರುವುದಿಲ್ಲವೆಂದು

ನ್ಯಾಯಾಲಯವು ನಿರ್ಣಯಕ್ಕೆ ಬರುತ್ತದೆ. ಈ ಮೇಲ್ಕಂಡ ಎಲ್ಲಾ ಸಂಗತಿಗಳನ್ನು ಹಾಗೂ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯವನ್ನು ಪರಿಶೀಲಿಸಿ ಅಂಶ 1ರಿಂದ 3ನ್ನು ನಕಾರಾತ್ಮಕ ಎಂದು ನಿರ್ಣಯಿಸಲಾಗಿದೆ.

**23**. **ಅಂಶ 4-** ಈ ಮೇಲ್ಕಂಡ ಎಲ್ಲಾ ವಿವಾದಾಂಶಗಳನ್ನು ನಿರ್ಣಯಿಸಲಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**:: ಆದೇಶ ::**

ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ವಜಾ ಮಾಡಲಾಗಿದೆ.

ಈ ಮೇಲ್ಕಂಡಂತೆ ಡಿಕ್ರಿ ಬರೆಯತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ:**29ನೇ ಜುಲೈ 2026** ರಂದು ನಾನು ಉದ್ಘೋಷಿಸಿದ್ದೇನೆ.)

SAVITHARANI H V

Digitally signed by SAVITHARANI H V
Date: 2026.07.31 17:47:57 +0530

**(ಶ್ರೀಮತಿ. ಸವಿತರಾಣಿ ಹೆಚ್.ವಿ.)**
ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು, ಗುಬ್ಬಿ.

:: **ಅನುಬಂಧ ::**

**1. ವಾದಿ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-**

| | | |
|---|---|---|
| ಪಿ.ಡಬ್ಲ್ಯೂ -1 | : | ಶ್ರೀ ಹೆಚ್.ಎಸ್. ದಯಾನಂದಮೂರ್ತಿ, |
| ಪಿ.ಡಬ್ಲ್ಯೂ -2 | : | ಶ್ರೀ ಲೋಕೇಶ್ ಕೆ.ಎಸ್. |
| ಪಿ.ಡಬ್ಲ್ಯೂ .-3 | : | ಶ್ರೀ ವಿಶ್ವನಾಥ್ |

**2. ವಾದಿ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-**

| | | |
|---|---|---|
| ನಿ.ಪಿ.1 | : | ದಿನಾಂಕ:15.03.2012 ರನೋಂದಾಯಿತ ಕ್ರಯದ ಕರಾರು ಪತ್ರ |
| ನಿ.ಪಿ.2 | : | ಕಾನೂನು ತಿಳುವಳಿಕೆ ಪತ್ರ. |
| ನಿ.ಪಿ.3 ಮತ್ತು 4 | : | ಅಂಚೆ ರಶೀದಿಗಳು. |
| ನಿ.ಪಿ.5 | : | ಅಂಚೆ ಸ್ವೀಕೃತಿ |

ನಿ.ಪಿ.6 : ನೋಟೀಸ್
ನಿ.ಪಿ.7 : ಅಂಚೆ ಲಕೋಟೆ
ನಿ.ಪಿ.8 ಮತ್ತು 9: ಪಹಣಿ ಪತ್ರಿಕೆಗಳು.

**ಪ್ರತಿವಾದಿಯರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿ ಗಳ ಪಟ್ಟಿ:-**

ಡಿ.ಡಬ್ಲ್ಯೂ -1 : ಶ್ರೀಮತಿ ಬಿ.ಜಿ. ಅನಸೂಯ

**ಪ್ರತಿವಾದಿಯರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-**

ನಿ.ಡಿ.1 : ಎಂ.ಆರ್.
ನಿ.ಡಿ.2 : ಮರಣ ಪ್ರಮಾಣ ಪತ್ರ
ನಿ.ಡಿ.3 ಮತ್ತು 4: ಎಂ.ಆರ್.ಗಳು
ನಿ.ಡಿ.5 : ಪಹಣಿ ಪತ್ರಿಕೆ.

SAVITHARANI H V

Digitally signed by SAVITHARANI H V
Date: 2026.07.31 17:48:08 +0530

**(ಶ್ರೀಮತಿ. ಸವಿತರಾಣಿ ಹೆಚ್.ವಿ.)**
ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು, ಗುಬ್ಬಿ.